# 75. ಆತ್ಮಶುದ್ಧಿ ಸಾಧನ ಸಾಮಾಯಿಕ

ಧಾರ್ಮಿಕನಾರು ?

ಧಾರ್ಮಿಕವಾದ ರೀತಿ ನೀತಿಗಳನ್ನೂ, ಕಟ್ಟುಕಟ್ಟಳೆಗಳೂ, ವ್ರತ, ನೇಮ ನಿಯಮಗಳು ನೈತಿಕವಾದ, ವೈಜ್ಞಾನಿಕವಾದ ರೀತಿಯಲ್ಲಿ ಪೂರ್ವಾಚಾರ್ಯರು ಬಹು ವಿವೇಚನೆಯಿಂದ ವಿಧಿಸಿದ್ದಾರೆ. ಪಾಲಿಸಲು ಹೇಳಿದ್ದಾರೆ. ವ್ಯಕ್ತಿಯ ಮಾನಸಿಕ ದೋಷಗಳನ್ನು, ವಿಕಾರಗಳನ್ನು, ಚಂಚಲತೆಯನ್ನು ಅಂತ್ಯಗೊಳಿಸಿ ಅವನಿಗೆ ಉತ್ತಮವಾದ ನೆಮ್ಮದಿಯನ್ನು, ಸ್ಥಿರತೆಯನ್ನು, ಶಾಂತಿಯನ್ನು ದೊರಕಿಸುವ ಮಾರ್ಗೋಪಾಯವನ್ನು ತೋರಿಸಿದ್ದಾರೆ. ಅವರು ತೋರಿದ ಧರ್ಮಮಾರ್ಗವು ತನ್ನನ್ನು ಆಶ್ರಯಿಸಿದವನಿಗೆ ಸುಖದ ಸಾನಿಧ್ಯವನ್ನು ದೊರಕಿಸುತ್ತದೆ.

ಈ ಸುಖಶಾಂತಿಯ ಅರಿವು, ಅನುಭವಗಳು ಆತ್ಮನಿಗೆ ಅತ್ಯವಶ್ಯಕ. ಆತ್ಮವು ಸದಾ ಉತ್ತಮವಾದ ಸುಖಶಾಂತಿಯನ್ನು ಬಯಸುತ್ತದೆ. ಅದನ್ನು ದೊರಕಿಸಲು ವ್ಯಕ್ತಿಯು ಧರ್ಮ ಮಾರ್ಗದಲ್ಲಿ ಸಾಗಬೇಕು. ಧರ್ಮವೇ ಸುಖದಸಾಧನ.

ತನ್ನಲ್ಲಿಯೇ ಇರುವ ನಿತ್ಯಸತ್ಯವಾದ ಉತ್ತಮ ಸುಖವನ್ನು ಮರೆ ಮಾಡಿರುವ ಕರ್ಮದ ಆವರಣವನ್ನು ತೆಗೆದು ಹಾಕಲು ಧಾರ್ಮಿಕ ಚಿಕಿತ್ಸೆಬೇಕು. ಅದನ್ನು ಪೂರ್ವಾಚಾರ್ಯರು ವಿವಿಧ ರೀತಿಯಲ್ಲಿ ತಿಳಿಸಿದ್ದಾರೆ.

ಆತ್ಮನು ಅನಾದಿಕಾಲದಿಂದಲೂ ಕರ್ಮವೆಂಬ ಜಡದ ಸಂಪರ್ಕದಿಂದ ರಾಗದ್ವೇಷ, ಕಷಾಯ, ಮೋಹ, ಮಾಯಾಜಾಲದಲ್ಲಿ ಸಿಕ್ಕಿ ಸಂಕಲ್ಪ, ವಿಕಲ್ಪಗಳ ವಿಕಾರದಿಂದ ತನ್ನನ್ನೂ, ತನ್ನ ನೈಜ ಸುಖವನ್ನು ಕಾಣದಾಗಿದ್ದಾನೆ. ಈ ಜಡ ಸಾಮಗ್ರೀಯಗಳೆ, ನಾನು, ಇದೇ ಸುಖ, ಎಂದು ನಂಬಿ ಭ್ರಮಿತನಾಗಿದ್ದಾನೆ. ಈ ಭ್ರಮೆಯನ್ನು ನಿವಾರಿಸಿಕೊಳ್ಳಲು ಧರ್ಮದ ನಂಬಿಕೆ, ಧರ್ಮದಮಾರ್ಗವನ್ನು ತಿಳಿಸಿದ ಆಪ್ತ, ಆಗಮ, ಗುರುಗಳಲ್ಲಿ ಭಕ್ತಿ, ಶ್ರದ್ಧೆ, ಆಸಕ್ತಿ, ಆಚರಣೆ ಅತ್ಯವಶ್ಯಕ.

ಧರ್ಮವೆಂಬುದು ಕಣ್ಣಿಗೆ ಕಾಣುವುದಿಲ್ಲ, ಕೈಗೆಸಿಗುವುದಿಲ್ಲ, ಅಂತೆಯೇ ಆತ್ಮನೂ ಕೂಡ. ಧರ್ಮವು ಆತ್ಮನೊಂದಿಗೆ ಮಿಲನವಾಗಬೇಕು. ಆಗ ತನ್ನಲ್ಲಿದ್ದ ವಿಕಾರೀ ಮಲಿನಗಳು ಜಾರಿ ಹೋಗಿ ನೈಜಸುಖದೊರೆಯುವುದು. ಆತ್ಮನಿಗೆ ಹಿತವಾದುದು ಧರ್ಮ, ಅಹಿತವಾದುದು ಅಧರ್ಮ.

ಅದ್ದರಿಂದ ಅಹಿತವಾದ ಅಧರ್ಮವನ್ನು ನಂಬದೆ, ಆಚರಿಸಿದೆ ಸದ್ಧರ್ಮವನ್ನು ನಂಬಿ ತಿಳಿದು ಆಚರಿಸಬೇಕು. ಧರ್ಮವೆಂದರೆ ಅಹಿಂಸೆ. ಇದನ್ನು ಬಿಟ್ಟು ಧರ್ಮವಿಲ್ಲ. ಇದನ್ನು ನಿರ್ದೋಷವಾಗಿ ಪಾಲಿಸಲು ಮಿಕ್ಕೆಲ್ಲ ಕಟ್ಟುಪಾಡುಗಳನ್ನು ನೀತಿ ನಿಯಮಗಳನ್ನು, ವ್ರತ ನೇಮಗಳನ್ನು ತಿಳಿಸಿದ್ದಾರೆ, ಇವೆಲ್ಲಧರ್ಮದ ವಿವಿಧ ರೂಪಗಳು, ಧರ್ಮಪಾಲಕನೇ ಧಾರ್ಮಿಕ.

## ಸಾಮಾಯಿಕವೆಂದರೇನು?

ಧಾರ್ಮಿಕನು ಮೊದಲಿಗೆ ಅಹಿಂಸಕನಾಗಿ, ಹಿಂಸಾವೃತ್ತಿಯನ್ನು ಬಿಟ್ಟು ತನ್ನ ಭಾವನೆ, ಕಾರ್ಯ, ಮಾತುಗಳನ್ನು ಶುಭವಾಗಿಟ್ಟುಕೊಳ್ಳಬೇಕು. ಅದಕ್ಕಾಗಿ ಮಧು, ಮದ್ಯ, ಮಾಂಸಗಳನ್ನು ತ್ಯಜಿಸಬೇಕು. ವ್ಯಸನಗಳನ್ನು ಬಿಡಬೇಕು, ಸತ್ಯಪಾಲನೆ, ಶೀಲಪಾಲನೆ, ಸಂಯಮ, ಪರಿಗ್ರಹ, ಸಮಿತಿ, ಸರಳ, ಸಭ್ಯಸಾತ್ವಿಕ ವರ್ತನೆ ಮುಂತಾದ ಸದಾಚಾರವನ್ನು ಪಾಲಿಸಬೇಕು. ಹೀಗಾದರೆ ಮಾತ್ರ ಅನಾದಿಕಾಲದಿಂದ ಅಂಟಿಬಂದಿರುವ ಕರ್ಮದ ಕೊಳೆ, ವಿಕಾರವನ್ನು ಕಳೆದುಕೊಳ್ಳಲು ಸಾಧ್ಯ.

ಹೀಗಾಗಿ ಆತ್ಮ ಶುದ್ಧಿಯ ಮನೋ ನೈರ್ಮಲ್ಯದ ಭಾವ ಶುದ್ಧಿಯ ಕಾರ್ಯಗಳಿಗೆ ವ್ರತಗಳನ್ನೂ, ನೆಲೆಗಳನ್ನೂ ಹೇಳಿದ್ದಾರೆ.

ವ್ರತಗಳು ಅಣುವ್ರತ, ಮಹಾವ್ರತಗಳೆಂದು ಎರಡುವಿಧ. ಅಣುವ್ರತಗಳು ಗೃಹಸ್ಥರಿಗೂ ಮಹಾವ್ರತಗಳು ಮುನಿಗಳಿಗೂ ವಿಧಿಸಲ್ಪಟ್ಟಿವೆ.

ಗೃಹಸ್ಥರೂ, ಮುನಿಗಳೂ ಪಾಲಿಸಲೇಬೇಕಾದ ವ್ರತಗಳಲ್ಲಿ ಒಂದಾದ ಸಾಮಾಯಿಕ ವ್ರತವು ಅತಿಮುಖ್ಯವಾದುದು.

ಶ್ರಾವಕರುಪಾಲಿಸುವ ಅಣುವ್ರತ, ಗುಣವ್ರತ ಮತ್ತು ಶಿಕ್ಷಾವ್ರತಗಳಲ್ಲಿ ಸಾಮಾಯಿಕ ವ್ರತವೂ ಒಂದು. ಇದು ಶಿಕ್ಷಾವ್ರತದ ಒಂದು ಭೇದವಾಗಿದೆ. ಹಾಗೆಯೇ ನೈಷ್ಠಿಕ ಶ್ರಾವಕನು ಪಾಲಿಸುವ ಹನ್ನೊಂದು ನೆಲೆಗಳಲ್ಲಿ ಸಾಮಾಯಿಕವೂ ಒಂದು. ಅಂತೆಯೇ ಮುನಿಗಳು ಪಾಲಿಸುವ ಇಪ್ಪತ್ತೆಂಟು ಮೂಲಗುಣಗಳಲ್ಲಿ ಸಾಮಾಯಿಕವೂ ಒಂದು ವಿಧ. ಇದು ಆರು ಅವಶ್ಯಕ ಕ್ರಿಯೆಗಳಲ್ಲಿ ಮೊದಲನೆಯದಾಗಿದೆ.

ಹೀಗಾಗಿ ಸಾಮಾಯಿಕವೆಂಬ ಕ್ರಿಯೆಯು ಗೃಹಸ್ಥರಿಗೂ, ಮುನಿಗಳಿಗೂ ಕಡ್ಡಾಯವಾಗಿದೆ. ಸಾಮಾಯಿಕವೆಂದರೆ ಸಮತಾಭಾವನೆ, ಸಮಾನತೆ, ಸಂಯಮ ಸಾಧನೆ, ಸಮಾಧಾನ, ಶಾಂತಭಾವ, ಎಂದರ್ಥ.



ದೇವರ ಸ್ಮರಣೆ ಮಾಡುತ್ತಾ ಸುಖ ದುಃಖಿಗಳಲ್ಲಿ, ಶತ್ರುಮಿತ್ರರಲ್ಲಿ ಮಾಧ್ಯಸ್ಥಭಾವದಿಂದ ಇದ್ದು ಸದಾ ಶಾಂತ ಸಮಾಧಾನ ವಾಗಿರುವುದೇ ಸಾಮಾಯಿಕ. ಆತ್ಮಧ್ಯಾನದ ಪ್ರಾರಂಭಿಕ ಕ್ರಿಯೆಯೇ ಇದು.

ತಾನು ಈ ಹಿಂದೆ ಮಾಡಿದ, ಮಾಡಿಸಿದ, ಅನುಮೋದನೆ ಮಾಡಿದ, ಪಾಪಗಳನ್ನು ಕುರಿತು ಪರಮ ಶಾಂತಿ ಭಾವದಿಂದ ಚಿಂತನೆ ಮಾಡಿ ಅವುಗಳಿಗೆ ಪಶ್ಚಾತ್ತಾಪ ಪಟ್ಟು ಮುಂದೆ ಅಂತಹ ಪ್ರಮಾದವು ತನ್ನಿಂದಾಗದಂತೆ ಎಚ್ಚರ ವಹಿಸುವುದಕ್ಕೆ ಸಾಮಾಯಿಕವೆನ್ನುತ್ತಾರೆ.

ಸಮತಾ ಸರ್ವ್ವಭೂತೇಷು, ಸಂಯಮ ಶುಭ ಭಾವನಂ ।
ಆರ್ತರೌದ್ರ ಪರಿತ್ಯಾಗಂ, ತದ್ಧಿ ಸಾಮಾಯಿಕ ವ್ರತಂ ।

ಅಂದರೆ ಎಲ್ಲಾ ಜೀವಿಗಳನ್ನು ತನ್ನಂತೆಯೇ ಸಮಾನ ದೃಷ್ಟಿಯಲ್ಲಿ ಕಾಣುವುದು. ಎಲ್ಲರಲ್ಲಿಯೂ ಮಿತ್ರತ್ವವನ್ನು ತಾಳುವುದೂ, ಯಾರನ್ನು ವೈರ ದ್ವೇಷ, ತಿರಸ್ಕಾರ ಮಾಡದಿರುವುದೂ ಇತರ ಸುಖ, ದುಃಖಿಗಳಲ್ಲಿ ಸ್ಪಂಧಿಸುವುದೂ, ಕರುಣೆ ತೋರುವುದೂ ಮತ್ತು ಮನ ವಚನ ಕಾಯಗಳನ್ನೂ, ಇಂದ್ರಿಯಗಳನ್ನೂ ಹರಿಬಿಡದೆ ತನ್ನ ವಶದಲ್ಲಿಟ್ಟುಕೊಳ್ಳುವುದೂ, ಆರ್ತ ಧ್ಯಾನ-ರೌದ್ರಧ್ಯಾನಗಳನ್ನು ಮಾಡದೆ ಸದಾ ಶಾಂತಿ ಸಮಾಧಾನ, ಸಮತಾಭಾವದಿಂದ ವರ್ತಿಸುವುದೇ ಸಾಮಾಯಿಕವಾಗಿದೆ.

ಸಾಮಾಯಿಕವು ಅಂತರಂಗದ ಮತ್ತು ಬಹಿರಂಗದ ಪ್ರಕ್ರಿಯೆಯಾಗಿದೆ. ಇದು ಚಾರಿತ್ರದ ಹೆಗ್ಗುರುತು. ಆತ್ಮ ಶುದ್ಧಿಗೆ ಮುಖ್ಯ ಸಾಧನ. ಇಂತಹ ಸಾಮಾಯಿಕವನ್ನು ಪಾಲಿಸುವ ಶ್ರಾವಕನು ಆ ಸಮಯದಲ್ಲಿ ವಸ್ತ್ರಸಹಿತವಿರುವ ಮುನಿ ಎನ್ನಿಸುತ್ತಾನೆ. ಈತ ಉಪಚಾರದಿಂದ ಯತಿ ಭಾವವನ್ನು ಹೊಂದಿರುತ್ತಾನೆ.

ಕ್ಷಮೆ, ತಾಳ್ಮೆ, ದಯೆ, ಶಾಂತಿ, ಸಹನೆ, ಸಮಾಧಾನ, ಸರಳತೆ, ಸಭ್ಯತೆ, ಸಜ್ಜನಿಕೆ, ಮೃದು ಸ್ವಭಾವ ಮುಂತಾದವು ಸಾಮಾಯಿಕದ ಚಿಹ್ನೆಗಳು. ಸುಖದಲ್ಲಿ ಹಿಗ್ಗದೆ, ದುಃಖದಲ್ಲಿ ಕುಗ್ಗದೆ ಜೀವನದಲ್ಲಿ ಬರುವ ಏರುಪೇರುಗಳಿಗೆ ಹಿಮ್ಮೆಟ್ಟದೆ ಸ್ಥಿರತೆಯಿಂದ ನಿಶ್ಚಲ ಚಿತ್ತನಾಗಿರುವುದು ಸಾಮಾಯಿಕತೆಯ ಲಕ್ಷಣ.

ಕರ್ಮೋದಯದ ನಿಮಿತ್ತದಿಂದ ಉಂಟಾಗುವ ಸುಖ ದುಃಖಾದಿ ವಿಭಾವ ಪರಿಣತಿಗೆ ಆತ್ಮನು ವಿಕಾರವಾಗದಂತೆ ಜಾಗರೂಕತೆಯನ್ನು ವಹಿಸುವುದೂ ಸಾಮಾಯಿಕವಾಗಿದೆ.

ಸ್ವಾಮೀ ಸಮಂತ ಭದ್ರಾಚಾರ್ಯರು ಹೇಳಿದ್ದಾರೆ. "ಅಸಮಯ ಮುಕ್ತಿ ಮುಕ್ತಂ ಪಂಚಾಘಾ ನಾಮ, ಶೇಷಭಾವೇನ ಸರ್ವತ್ರಚ ಸಾಮಾಯಿಕಾಃ ಸಾಮಾಯಿಕಂ ನಾಮ ಶಂಸಂತಿ॥

ಅಂದರೆ ತನ್ನ ಎಲ್ಲೆ ಕಟ್ಟಿನ ಒಳಗೆ ಮನ ವಚನ, ಕಾಯ, ಕೃತ, ಕಾರಿತ, ಅನುಮೋದನೆಗಳಿಂದ ಒಂದು ನಿಯಮಿತ ಸಮಯದವರೆಗೆ ಪಂಚ ಪಾಪಗಳನ್ನು ತೊರೆದು ಸದಾ ಶುಭ ಧ್ಯಾನ, ಸದ್ಭಾವನೆಯಲ್ಲಿರುವುಕ್ಕೆ ಸಾಮಾಯಿಕವೆನ್ನುತ್ತಾರೆ.

**ಸಾಮಾಯಿಕ ವಿಧಿ:–**

ಸಮಾಯಿಕವು ಭಾವಸಹಿತವಾದ ಒಂದು ಕ್ರಿಯಾ ಪ್ರಧಾನವಾದುದು. ಇದಕ್ಕೊಂದು ನೀತಿ ನಿಯಮ ಆಚಾರ ವಿಚಾರ ಉಂಟು.

ಶ್ರಾವಕನು ತಲೆಕೂದಲು ಕಟ್ಟುವಂತೆ ಉದ್ದನಾಗಿದ್ದರೆ ಜುಟ್ಟು ಕಟ್ಟಿಕೊಂಡು. ತನ್ನ ಕೈಗಳನ್ನು ಕಟ್ಟಿಕೊಂಡು, ವಸ್ತ್ರವನ್ನು ಕಟ್ಟಿಕೊಂಡು ಇವು ಮತ್ತೆ ಬಿಚ್ಚುವವರೆಗೂ ಅಥವಾ ಒಂದಿಷ್ಟು ಸಮಯದವರೆಗೆ ಸಮತಾಭಾವದಿಂದ ಸಾಮಾಯಿಕ ಮಾಡುತ್ತೇನೆಂದು ಪ್ರತಿಜ್ಞೆ ಮಾಡಬೇಕು.

ಎಷ್ಟರವರೆಗೆ ತನ್ನಲ್ಲಿ ಸಮತಾ ಭಾವವಿರುತ್ತದೋ ಅದುವರೆಗೆ ಸಾಮಾಯಿಕವನ್ನು ಮಾಡಬಹುದು. ಒಂದು ವೇಳೆ ಮನೋ ಚಾಂಚಲ್ಯವಾದರೆ ಸಾಮಾಯಿಕ ಕ್ರಿಯೆಯನ್ನು ಬಿಡಬಹುದು. ಆದರಿಂದಾಗಿ ಈ ಸಾಮಾಯಿಕದ ಕಾಲಮಿತಿಯನ್ನು ಶಿರೋಬಂಧನ, ಹಸ್ತ ಬಂಧನ, ವಸ್ತ್ರ ಬಂಧನ, ಪಲ್ಯಂಕಾಸನ, ಕಾಯೋತ್ಸರ್ಗ ಇವುಗಳು ಸಡಿಲವಾಗುವವರೆಗೂ ಚಂಚಲವಾಗುವವರೆಗೂ ಸಾಮಾಯಿಕ ಮಾಡಬಹುದೆಂದಿದ್ದಾರೆ.

ಯಾರು ಮಾಯಾಚಾರ, ಮಿಥ್ಯಾಭಾವ, ನಿಧಾನವೆಂಬ ಶಲ್ಯರಹಿತನಾಗಿರುತ್ತಾನೋ, ಅತಿಚಾರವಿಲ್ಲದೆ ಪಂಚಾಣುವ್ರತವನ್ನು ಪಾಲಿಸುತ್ತಾನೋ, ಗುಣವ್ರತ - ಶಿಕ್ಷಾವ್ರತಗಳೆಂಬ ಸಪ್ತಶೀಲವನ್ನು ಧರಿಸಿದ್ದಾನೋ ಅವನು ಸಾಮಾಯಿಕವನ್ನು ನಿಷ್ಠೆಯಿಂದ ನಿರತಿಚಾರವಾಗಿ ಪಾಲಿಸಬಲ್ಲನು.

ಹೀಗೆಂದಾಕ್ಷಣಾ ತಾನು ಇವನ್ನೆಲ್ಲಾ ಪಾಲಿಸಲಾಗುವುದಿಲ್ಲವೆಂದು ಸಮತಾ ಭಾವನೆ, ಶುಭಭಾವನೆ, ಸಹಿಷ್ಣುತೆ, ಸಂಯಮ, ಧರ್ಮ, ಧ್ಯಾನಗಳನ್ನು ಬಿಡಬೇಕೆಂದಲ್ಲ. ಸಮತಾಭಾವನೆ, ಸಾಮಾಯಿಕವೆಂಬುದು ಮಾನವೀಯ ಗುಣವಾಗಿದೆ.

ಸಾಮಾಯಿಕವನ್ನು ಮಾಡುವವರು ಪೂರ್ವ ಅಥವಾ ಉತ್ತರಾಭಿಮುಖವಾಗಿ ಕುಳಿತೋ ಅಥವಾ ನಿಂತೋ ಸಮಸ್ತ ಪರಿಗ್ರಹಗಳನ್ನು ಅಂತರಂಗದಲ್ಲೂ ಬಾಹ್ಯದಲ್ಲಿಯೂ ತೊರೆದು ಮನ ವಚನ ಕಾಯ ಶುದ್ಧನಾಗಿ ಸಾಮಾಯಿಕ



ಕ್ರಿಯೆಯನ್ನು ಮಾಡಬೇಕು. ನಾಲ್ಕೂ ದಿಕ್ಕಿಗೆ ಕೈ ಮುಗಿಯುತ್ತಾ ಪಂಚ ಣಮೋಕಾರ ಮಂತ್ರವನ್ನು ಹೇಳುತ್ತಾ ಕೈಗಳನ್ನು ಮೇಲೆತ್ತಿ ಮೂರು ಸಾರಿ ತಿರುಗಿಸುತ್ತಾ ನಮಸ್ಕರಿಸಬೇಕು. ಹೀಗೆ ಮಾಡಿದರೆ 4x3=12 ಸಾರಿ ನಮಸ್ಕಾರವಾಗುತ್ತದೆ. ಈ ಸಮಯದಲ್ಲಿ ಏಕಾಗ್ರತೆ, ಸಮತೆ, ಶಾಂತಿಭಾವ, ಅಂತರಂಗ ಶುದ್ಧಿ ಇರಬೇಕು. ನಮಸ್ಕಾರವಾದ ನಂತರ ಜಪ, ಧ್ಯಾನ, ಆತ್ಮಚಿಂತನೆ, ಸ್ತೋತ್ರ, ಭಜನೆ ಮಾಡಬೇಕು. ಹೀಗೆ ಬೆಳಿಗ್ಗೆ, ಮಧ್ಯಾಹ್ನ ಸಂಜೆಗಳಲ್ಲಿ ಮಾಡಬೇಕು. ಸಾಮಾಯಿಕಕ್ಕೆ ಯೋಗ್ಯವಾದ ಸ್ಥಾನಗಳೆಂದರೆ ಹೆಚ್ಚಾಗಿ ಜನ ಸಂದಣಿ ಇಲ್ಲದ, ಗಲಾಟೆ, ಗದ್ದಲ ಇಲ್ಲದೆ ಏಕಾಂತ ಸ್ಥಳವಾಗಬೇಕು. ಮನೆ, ನಿರ್ಜನವಾದ ಕೊಠಡಿ, ಜಿನ ಮಂದಿರ, ಶಿಬಿರ, ಗುಹೆ ಮುಂತಾವುಗಳಲ್ಲಿ ಶಾಂತ ಚಿತ್ತದಿಂದ ಸಾಮಾಯಿಕ ಮಾಡಬೇಕು. ಈ ಸಮಯದಲ್ಲಿ ಮೌನದಿಂದಿದ್ದು ತನ್ನ ಪಂಚೇಂದ್ರಿಯಗಳ ಅಭಿಲಾಷೆಯನ್ನು ತಡೆದು ಯಾರಲ್ಲೂ ರಾಗದ್ವೇಷ ಮಾಡದೆ ಸಮತಾಭಾವದಿಂದ ನಾಸಿಕಾಗ್ರದಲ್ಲಿ ದೃಷ್ಟಿ ಇಟ್ಟು ಜಿನದೇವರ, ಪಂಚಪರಮೇಷ್ಠಿಗಳ ಸ್ಮರಣೆ ಮಾಡಬೇಕು. ದ್ವಾದಶಾನುಪ್ರೇಕ್ಷೆ, ದಶಭಕ್ತಿ, ಚತುರ್ವಿಂಶತಿಸ್ತವನ, ಮುಂತಾದವುಗಳ ಸ್ವಾಧ್ಯಾಯ ಮಾಡಬೇಕು.

ಆಯತ ವರ್ಯನೆಂಬ ಕವಿ ಹೇಳಿದ್ದಾರೆ.

ಆಳುವಿಲ್ಲದೆ ಪಾಪಕ್ರಿಯೆ
ಗಳೆಲ್ಲವು ಮನಂಗ ಪಾನಂಗಳೊಳಂನಿ ।
ರ್ಮಲ ಮಾಗೆ ಪತ್ತು ವಿಡುವುದು
ತಿಳಿದೊಡ ವರ್ಗಕ್ಕುಂ ಈ ವ್ರತಂ ಸಾಮಾಯಿಕಂ ।

**ಸಾಮಾಯಿಕದ ಭಾವನೆ :**

ಇದನ್ನೇ ಉಮಾ ಸ್ವಾಮಿ ಆಚಾರ್ಯರು ಹೇಳಿದ್ದಾರೆ. "ರಾಗದ್ವೇಷ ಪರಿತ್ಯಾಗಾನ್ನಾ ತಾತ್ಸಾವದ್ಯ ಕರ್ಮಣಾಂ। ಸಮತಾಯಾತದಾನ್ನುತಂ ಬುಧ್ಯೆಃ ಸಾಮಾಯಿಕಂ ವ್ರತಂ ।

ಹೀಗೆ ಸರ್ವ ವಿಧವಾದ ಪಾಪ ಕ್ರಿಯೆಗಳನ್ನು ತೊರೆದು ಆತ್ಮ ಹಿತವಾದ ವಿಚಾರವನ್ನೇ ಸಮತಾ ಭಾವದಿಂದ ಸತ್ಪರಿಣಾಮಾವನ್ನು ಹೊಂದಿ ಆತ್ಮೋನ್ನತಿಗಾಗಿ ಮಾಡುವ ಕ್ರಿಯೆಯೇ ಸಾಮಾಯಿಕ.

ಶ್ರೀ ಅಮಿತಗತಿ ಆಚಾರ್ಯರು ಹೀಗೆ ಹೇಳಿದ್ದಾರೆ.

ಸತ್ವೇಷು ಮೈತ್ರೀಂ ಗುಣೀಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ

ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ
ಸದಾ ಮಮಾತ್ಮಾ ವಿದಧಾತು ದೇವಾ ॥

ಅಂದರೆ ಸಕಲ ಪ್ರಾಣಿ ವರ್ಗದವರೆಲ್ಲರಲ್ಲೂ ಮೈತ್ರಿ ಭಾವನೆಯೂ, ಕಷ್ಟದಲ್ಲಿರುವವರಿಗೆ ನನ್ನ ಕೈಲಾದ ಸಹಾಯ ಮಾಡುವ ಉದಾರತೆಯೂ, ಗುಣಿಗಳಲ್ಲಿ ಗುರುಹಿರಿಯರಲ್ಲಿ ಜ್ಞಾನಿಗಳಲ್ಲಿ ಸಜ್ಜನರಲ್ಲಿ ಗೌರವ-ವಿಧೇಯತೆಯಿಂದ ನಡೆದುಕೊಳ್ಳುವಂತೆಯೂ, ವಿಪರೀತ ವರ್ತನೆಯುಳ್ಳವರಲ್ಲಿ ಮಾಧ್ಯಸ್ಥ ಮಿತಿಯಲ್ಲಿ ವರ್ತಿಸುವಂತೆಯೂ ನನ್ನ ನಡತೆಯಾಗಲೀ.

ಸುಖೇ ದುಃಖೇ ವೈರಿಣಿ ಬಂಧು ವರ್ಗೇ।
ಯೋಗೇ ವಿಯೋಗೇ ಭುವನೇ ವನೇವಾ॥
ನಿರಾಕೃತಾ ಶೇಷ ಮಮತ್ವ ಬುದ್ಧೇ
ಸಮಂ ಮನೋ ಮೇಸ್ತು ಸದಾಪಿನಾಥ ॥

ಅಂದರೆ ಹೇ ಪ್ರಭೋ ನನ್ನ ಮನಸ್ಸು ಸುಖದಲ್ಲೂ, ದುಃಖದಲ್ಲೂ, ವೈರಿಗಳಲ್ಲೂ ಮತ್ತು ಬಂಧುಗಳಲ್ಲೂ, ಇಷ್ಟವಿಯೋಗ ಅನಿಷ್ಟ ಸಂಯೋಗದಲ್ಲೂ, ಮನೆಯಲ್ಲಿ, ವನದಲ್ಲಿರಲಿ, ಮಂದಿರದಲ್ಲಿರಲಿ ಎಲ್ಲಾ ಸಮಯದಲ್ಲೂ ನನ್ನ ಈ ಸಮತಾ ಭಾವವು ಸ್ಥಿರವಾಗಿರಲಿ. ಇದೇ ಸಾಮಾಯಿಕ ಭಾವನೆ.

ಸಾಮಾಯಿಕದ ಸಮಯದಲ್ಲಿ ಭಗವಂತನ ಎದುರಿನಲ್ಲಿ ಶುಭ ಭಾವದಿಂದ ಪ್ರಾರ್ಥನೆ. ಆತ್ಮಧ್ಯಾನ ಮಾಡಬೇಕು. ಇದರಿಂದ ತನ್ನಲ್ಲಿರುವ ಸಮ್ಯಕ್ತ್ವವು ದೃಢವಾಗುವುದು. ಇಂತಹ ವ್ಯಕ್ತಿಗೆ ಯಾರೂ ಶತ್ರುಗಳಿರುವುದಿಲ್ಲ. ಅವನಿಗೆ ದುಃಖವೂ ಇರುವುದಿಲ್ಲ. ಈತ ಧರ್ಮಮಾರ್ಗದಲ್ಲಿ ಎಡೆಬಿಡದೆ ನಡೆದು ಉತ್ತರೋತ್ತರ ತನ್ನಾತ್ಮ ಕಲ್ಯಾಣ ಮಾಡಿಕೊಳ್ಳುವನು. ಹೀಗಾಗಿ ಆತ್ಮ ಶುದ್ಧಿಗೆ ಸಾಮಾಯಿಕವು ಪ್ರಮುಖ ಸಾಧನವಾಗಿದೆ.

ಖಮ್ಮಾಮಿ ಸವ್ವ ಜೀವಾಣಂ! ಸವ್ವೇಜೀವಾ ಖಮಂತುಮೇ ।
ಮೇತ್ತೀಮೇ ಸವ್ವಭೂದೇಸು, ವೇರಂ ಮಜ್ಝಂಣಕೇಣವಿ ॥

ಅಂದರೆ ನಾನು ಎಲ್ಲಾ ಜೀವಿಗಳನ್ನೂ ಕ್ಷಮಿಸುತ್ತೇನೆ, ಎಲ್ಲಾ ಜೀವಿಗಳೂ ನನ್ನನು ಕ್ಷಮಿಸಲಿ, ಎಲ್ಲರೂ ನನಗೆ ಮಿತ್ರರು. ನನಗೆ ಯಾರಲ್ಲಿಯೂ ವೈರವಿಲ್ಲ, ಎಂಬ ಈ ಮಾತು ಸಮತಭಾವದ ಪರಮಾವಧಿಯಾಗಿದೆ.



# 76. ಶ್ರಾವಕರ ಆತ್ಮೋನ್ನತಿಯ ಅಂತಸ್ತುಗಳು

ಜೈನ ಧರ್ಮದಲ್ಲಿ ಚಾರಿತ್ರಕ್ಕೆ ಪ್ರಾಮುಖ್ಯತೆ ಹೆಚ್ಚು. ಆದ್ದರಿಂದಲೇ "ಚಾರಿತ್ತಂ ಖಲು ದಮ್ಮೋ" ಎಂದೂ, "ಚಾರಿತ್ರಂ ಪ್ರಥಮೋ ಧರ್ಮಃ" ಎಂದೂ ಚಾರಿತ್ರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಚಾರಿತ್ರ ಎಂದರೆ ಆಚಾರ, ಸನ್ನಡತೆ ಸದಾಚಾರ ಎಂದರ್ಥ.

ಚಾರಿತ್ರವು ಎರಡು ವಿಧವಾಗಿದೆ. 1. ಶ್ರಾವಕಾಚಾರ, 2. ಮುನಿಆಚಾರ. ಶ್ರಾವಕಾಚಾರವು ಮುನಿಗಳ ಆಚಾರಕ್ಕೆ ಭದ್ರವಾದ ಬುನಾದಿಯಾಗಿದೆ. ಶ್ರಾವಕನೆಂದರೆ ಗೃಹಸ್ಥ. ಇಲ್ಲಿ ಶ್ರಾವಕರು ಮುಖ್ಯವಾಗಿ ಪಾಲಿಸುವ ಆಚಾರದಲ್ಲಿ ಕೆಲವೊಂದು ಅಂಶವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ.

ಶ್ರಾವಕರು ಹಂತ ಹಂತವಾಗಿ ತನ್ನ ಶಕ್ತಿ ಸಾಮರ್ಥ್ಯ, ಅವಕಾಶಗಳನ್ನು ನೋಡಿಕೊಂಡು ಚಾರಿತ್ರವನ್ನು ಪಾಲಿಸುತ್ತಾ ಮುಂದೆ ಸಾಗಬಹುದು.

ಶ್ರಾವಕನು ಮೊದಲು ಅಷ್ಟಮೂಲಗುಣವನ್ನು ಪಾಲಿಸಲೇಬೇಕು. ಅವುಗಳೆಂದರೆ:- ಮಧು, ಮದ್ಯ, ಮಾಂಸವನ್ನು ಉಪಯೋಗಿಸಬಾರದು, ಮತ್ತು ಹತ್ತಿ, ಆಲ, ಗೋಣಿ, ಅರಳಿ, ಬಸರಿ ಎಂಬ ಐದು ರೀತಿಯ ಹಣ್ಣುಗಳನ್ನು ತಿನ್ನಬಾರದು. ಇವುಗಳಿಂದ ಹಿಂಸೆಯಾಗುತ್ತದೆ. ಬುದ್ಧಿಹೀನವಾಗುತ್ತದೆ. ಅಮಲು ಬರುತ್ತದೆ. ಪಾಪ ಕರ್ಮ ಬಂಧವಾಗುತ್ತದೆ.

ಇವುಗಳ ಜೊತೆಗೆ ಜೈನ ಸಂಸ್ಕೃತಿಯ ಹೆಗ್ಗುರುತುಗಳಾದ ರಾತ್ರಿ ಭೋಜನ ತ್ಯಾಗ ಮತ್ತು ನೀರು ಸೋಸಿ ಉಪಯೋಗಿಸಬೇಕು. ಶಾವಕನು ಸಮ್ಯಗ್ದೃಷ್ಟಿಯಾಗಿರಬೇಕು. ಮೂಢನಂಬಿಕೆ ಕಂದಾಚಾರಗಳಿಗೆ ಬಲಿಯಾಗಬಾರದು.

ಶ್ರಾವಕನು ಮುಂದುವರಿದು ಜಿನ ದೇವರು, ಜಿನವಾಣಿ, ಜಿನಗುರುವಿನಲ್ಲಿ ಶ್ರದ್ಧೆ ಭಕ್ತಿ ಇಡಬೇಕು. ಧರ್ಮವನ್ನು ತಿಳಿಯಬೇಕು.

ನಿತ್ಯವೂ ತಪ್ಪದೇ ಪಾಲಿಸಿಲೇ ಬೇಕಾದ ದೇವರ ಪೂಜೆ, ಗುರುಗಳ ಸೇವೆ, ಧರ್ಮಗ್ರಂಥಗಳ ಸ್ವಾಧ್ಯಾಯ, ಇಂದ್ರಿಯಗಳನ್ನು ಹತೋಟಿಯಲ್ಲಿಡುವುದು, ಹಿಂಸೆ ಮಾಡದಿರುವುದು ಮತ್ತು ಉಪವಾಸ ಮುಂತಾದ ತಪವನ್ನು ಸಾಧಿಸುವುದೂ ಹಾಗೂ

ಶಕ್ತಿ ಇದ್ದಷ್ಟು ಧಾನ, ಧರ್ಮ ಮಾಡುವುದು ಎಂಬ ಆರು ಕ್ರಿಯೆಗಳನ್ನು ಮಾಡಬೇಕು. ಇದಿಷ್ಟೂ ಪಾಕ್ಷಿಕ ಶ್ರಾವಕನ ಕ್ರಿಯೆಗಳು.

ಆನಂತರ ಅಹಿಂಸಾ ಪಾಲನೆ, ಸುಳ್ಳು ಹೇಳದಿರುವುದೂ, ಕಳ್ಳತನ ಮಾಡದಿರುವುದೂ, ಶೀಲಪಾಲನೆ ಅಂದರೆ ಸ್ವಪತ್ನಿ-ಪತಿಯರಲ್ಲಿ ಸಂತೋಷ ಪಡುವುದು, ಪರಿಮಿತ ಪರಿಗ್ರಹ ಎಂಬ ಐದು ಅಣುವ್ರತಗಳನ್ನು ಪಾಲಿಸಬೇಕು. ಹಾಗೂ ಮೂರು ಗುಣವ್ರತಗಳನ್ನೂ ನಾಲ್ಕು ಶಿಕ್ಷಾ ವ್ರತಗಳನ್ನೂ ಪಾಲಿಸುವವರು ನೈಷ್ಠಿಕ ಶ್ರಾವಕರು.

ಶ್ರಾವಕನು ಧರ್ಮದಲ್ಲಿ ಶ್ರದ್ಧೆಯುಳ್ಳವನೂ, ವಿವೇಕಶಾಲಿಯೂ, ಕ್ರಿಯಾಶೀಲನೂ ಆಗಿ ಬಾಳಬೇಕು.

ಇನ್ನು ಮುಂದೆ ಈ ಶ್ರಾವಕನು ಪಾಲಿಸುವ ಹನ್ನೊಂದು ರೀತಿಯ ಆಚಾರಗಳ ಹಂತವನ್ನು ಏರಬೇಕು. ಶ್ರಾವಕನು ಆತ್ಮೋನ್ನತಿಯ ಕಡೆ ಸಾಗಲು ಈ ನಿಯಮಗಳ ಪಾಲನೆ ಅಗತ್ಯ, ಅವು ಯಾವುವೆಂದರೆ - ದಾರ್ಶನಿಕ, ವ್ರತಿಕ, ಸಾಮಾಯಿಕ, ಪ್ರೋಷಧೋಪವಾಸ, ಸಚಿತ್ತ ತ್ಯಾಗ, ರಾತ್ರಿ ಭೋಜನ ತ್ಯಾಗ, ಬ್ರಹ್ಮಚಾರಿ, ಆರಂಭವಿರತ, ಪರಿಗ್ರಹವಿರತ, ಅನುಮತಿವಿರತ, ಉದ್ದಿಷ್ಟವಿರತ, ಎಂಬಿವೇ ಹನ್ನೊಂದು ನೆಲೆಗಳು.

ಈ ಹನ್ನೊಂದು ಹಂತಗಳನ್ನು ಪ್ರತಿಮೆಗಳೆಂದೂ, ನೆಲೆಗಳೆಂದೂ ಹೇಳುವರು. ಇವು ದೇಶವಿರತವೆಂಬ ಐದನೇ ಗುಣಸ್ಥಾನದಲ್ಲಿರುವವರಿಗೆ ವಿಧಿಸಲ್ಪಟ್ಟಿವೆ. ಇವು ಸಮ್ಯಕ್ತ್ವದಿಂದ ಕೂಡಿದ ಶ್ರಾವಕರಿಗೆ ಹೇಳಲ್ಪಟ್ಟಿವೆ. ಇವನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಪಾಲಿಸಿಕೊಂಡು ಮೇಲೇರಬಹುದು. ಒಂದೊಂದೂ ಆತ್ಮೋನ್ನತಿಯ ಸಾಧನೆಗಳಾಗಿವೆ. ಇವೆಲ್ಲಾ ನೈಷ್ಠಿಕ ಶ್ರಾವಕನ ಅಂತಸ್ತುಗಳು.

**1. ದಾರ್ಶನಿಕ:–** ಅಂದರೆ ಸಮ್ಯಕ್ತ್ವವನ್ನು ಧರಿಸಿದವನು. ಅಷ್ಟ ಮೂಲ ಗುಣವನ್ನು ಪಾಲಿಸುವವನು ಜಿನದೇವ ಗುರು ಶಾಸ್ತ್ರ ಧರ್ಮದಲ್ಲಿ ದೃಢವಾದ ನಂಬಿಕೆ ಶ್ರದ್ಧೆಯುಳ್ಳವನಾಗಿರುತ್ತಾನೆ. ಮಿಥ್ಯಾತ್ವವನ್ನು ಬಿಟ್ಟಿರುವವನೂ ಆಗಿರುತ್ತಾನೆ. ದಾರ್ಶನಿಕನೆಂದರೆ ಸಮ್ಯಗ್ದರ್ಶನ ಉಳ್ಳವನು ಎಂದರ್ಥ. ಸಮ್ಯಗ್ದೃಷ್ಟಿಯು ಷಟ್‌ದ್ರವ್ಯ, ಸಪ್ತತತ್ತ್ವ, ನವಪದಾರ್ಥ, ಪಂಚಾಸ್ತಿ ಕಾಯಗಳೆಂಬ 25 ತತ್ತ್ವಗಳನ್ನು ನಂಬಿ ತಿಳಿಯಬೇಕು. ದೇವಮೂಢ ಲೋಕ ಮೂಢ ಪಾಖಂಡಿ ಮೂಢಗಳೆಂಬ ಮೂರು ಮೂಢತೆಗಳಿಲ್ಲದವನೂ, ನಿಃಶಂಕಾದಿ ಎಂಟು ಅಂಗ ಸಹಿತನಾದವನೂ, ಶಂಕಾದಿ ಎಂಟು ದೋಷರಹಿನೂ ಕುದೇವ, ಕುಗುರು,



ಕುಶಾಸ್ತ್ರಗಳೂ ಮತ್ತು ಅವುಗಳಿರುವ ಸ್ಥಳಗಳೆಂಬ ಆರು ಅನಾಯತನಗಳನ್ನು ನಂಬದೇ ಇರುವನೂ, ಎಂಟು ಮದಗಳಿಲ್ಲದವನೂ, ಎಂಟು ಭಯ ರಹಿತನೂ ಆಗಿರಬೇಕು. ಇಂತಹ ಶ್ರಾವಕನು ದಾರ್ಶನಿಕ ಪ್ರತಿಮಾಧಾರಿಯಾಗಿರುತ್ತಾನೆ. ಇವನು ಅವಿತರ ಸಮ್ಯಗ್ದೃಷ್ಟಿ ಎಂಬ ನಾಲ್ಕನೇ ಗುಣಸ್ಥಾನ ವರ್ತಿಯಾಗಿರುತ್ತಾನೆ.

**2. ವ್ರತಿಕ:–** ದಾರ್ಶನಿಕ ಪ್ರತಿಮಾಧಾರಿಯು ದೇಶ ವಿರತಿ ಎಂಬ ಐದನೇ ಗುಣಸ್ಥಾನ ವರ್ತಿಯಾಗಿಲು ವ್ರತಗಳನ್ನು ಪಾಲಿಸಬೇಕು. ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾ ವ್ರತಗಳನ್ನು ನಿರತಿಚಾರ ಪೂರ್ವಕ ಪಾಲಿಸಬೇಕು. ಹಿಂಸೆ ಮಾಡದಿರುವುದೂ, ಸುಳ್ಳು ಹೇಳದಿರುವುದೂ, ಕಳ್ಳತನ ಮಾಡದಿರುವುದು, ಸ್ವದರಸಂತೋಷ, ಪರಿಗ್ರಹ ಪರಿಮಿತಿ ಎಂಬದೇ ಐದು ಅಣುವ್ರತಗಳು. ದಿಗ್ವ್ರತ ಅಂದರೆ ಹತ್ತೂದಿಕ್ಕಿನಲ್ಲಿ ಒಂದು ಪರಿಮಿತಿಯಲ್ಲಿ ವ್ಯವಹಾರ, ಓಡಾಟವನ್ನಿಟ್ಟು ಕೊಳ್ಳುವುದು. ದೇಶವ್ರತ ಎಂದರೆ ಯಾವ ಯಾವ ದೇಶದಲ್ಲಿ ಇಂತಿಷ್ಟೇ ದೇಶದ ಒಳಗೆ ಓಡಾಡುತ್ತೇನೆ, ವ್ಯವಹಾರ ಮಾಡುತ್ತೇ ನೆಂಬ ಪರಿಮಿತಿ ಇಟ್ಟುಕೊಳ್ಳುವುದು.

ಅನರ್ಥದಂಡ ವ್ರತ ಅಂದರೆ ಅನರ್ಥವಾಗುವ ಉಪಯೋಗವಿಲ್ಲದ ಯಾವ ಕ್ರಿಯೆ ಮಾಡದಿರುವುದು. ಇವು 3 ಗುಣ ವ್ರತಗಳ ವ್ರತಿಕನು ಪಾಲಿಸಬೇಕು.

ಶಿಕ್ಷಾವ್ರತಗಳು ನಾಲ್ಕು ಇವೆ.

ಸಾಮಾಯಿಕ - ಸಮತಾ ಭಾವದಿಂದ ಪಂಚ ಪರಮೇಷ್ಠಿಗಳ, ಜಿನರ ಗುರು-ಶಾಸ್ತ್ರಗಳ ವಂದನೆ ಮಾಡುವುದು.

ಪೋಷಧೋಪವಾಸ - ಅಷ್ಟಮೀ ಚತುರ್ದಶಿಗಳಲ್ಲಿ ಉಪವಾಸ ಮಾಡುವುದು.

ಭೋಗೋಪಭೋಗ ಪರಿಮಾಣ - ಆಭರಣ, ಬಟ್ಟೆ ಶ್ರೀಮಂತಿಕೆ, ಭೋಗ ಮತ್ತು ಉಪಭೋಗ ವಸ್ತುಗಳ ಉಪಯೋಗದಲ್ಲಿ ಪರಿಮಿತಿ ಇಟ್ಟಕೊಳ್ಳುವುದು.

ಅತಿಥಿಸಂವಿಬಾಗ - ಮನೆಗೆ ಬಂದ ಶ್ರಾವಕರೂ, ಮುನಿಗಳು ತ್ಯಾಗಿಗಳೂ ಸಾಧುಗಳ ಸತ್ಕಾರ ಮಾಡುವುದು. ಎಂಬ 4 ಶಿಕ್ಷಾವ್ರತಗಳನ್ನು ವ್ರತಿಕನು ಪಾಲಿಸಬೇಕು.

**3. ಸಾಮಾಯಿಕ:–** ಶುಚಿರ್ ಭೂತನಾಗಿ ಜಿನಾಲಯದಲ್ಲೋ-ಮನೆಯಲ್ಲೋ ಜಿನಬಿಂಬದ ಎದುರಿಗೆ ಅಥವಾ ನಿರ್ಜನ ಪ್ರದೇಶದಲ್ಲಿ ಸಮತಾಭಾವದಿಂದ ಉತ್ತರ ಅಥವಾ ಪೂರ್ವ ದಿಕ್ಕಿಗೆ ಮುಖಮಾಡಿ ಕುಳಿತು

ನವದೇವತೆಗಳ ಸ್ಮರಣೆಯನ್ನು ಶುಭ ಭಾವದಿಂದ ಮಾಡುವುದು.

4. **ಪ್ರೋಷಧೋಪವಾಸ** :- ಅಷ್ಟಮೀ ಚತುರ್ದಶಿಗಳಲ್ಲಿ ಉಪವಾಸ ಮಾಡುವುದು.

5. **ಸಚಿತ್ತವಿರತ** :- ಹಸಿರುಕಾಯಿ ಪಲ್ಲೆಗಳನ್ನೂ, ಕಂದಮೂಲಗಳನ್ನು ಉಪಯೋಗಿಸದಿರುವುದು.

6. **ರಾತ್ರಿ ಭೋಜನತ್ಯಾಗ** :- ಹೊತ್ತು ಮುಳುಗಿದ ಮೇಲೆ ಊಟ ಮಾಡದಿರುವುದು.

7. **ಬ್ರಹ್ಮಚರ್ಯ** :- ಸ್ತ್ರೀಯರು ಪುರುಷರ, ಪುರುಷರು ಸ್ತ್ರೀಯರ ಸಂಗವನ್ನೂ ಮಾಡದಿರುವುದು ಮತ್ತು ಆತ್ಮಜ್ಞಾನ ಸ್ವಾಧ್ಯಾಯದಲ್ಲಿ ತೊಡಗುವುದು.

8. **ಆರಂಭತ್ಯಾಗ** :- ಕೃಷೀ, ಆರಂಭ, ವ್ಯಾಪಾರ ವಹಿವಾಟು, ವ್ಯವಹಾರಗಳನ್ನು ಮಾಡದೆ ಸರಳ ಸಾತ್ವಿಕನಾಗಿ ಬಾಳುವುದು.

9. **ಪರಿಗ್ರಹತ್ಯಾಗ** :- ಮನೆ, ಜಮೀನು, ಹಣಕಾಸುಗಳ ವ್ಯವಹಾರವನ್ನು ತನ್ನ ಸಂತಾನಕ್ಕೆ ವಹಿಸಿ ಯಾವ ರೀತಿಯಿಂದ ಪರಿಗ್ರಹ, ಭೋಗಗಳನ್ನು ಹೊಂದದೆ ಸಂಸಾರದಲ್ಲಿ ನಿರ್ಲಿಪ್ತನಾಗಿರುವುದು.

10. **ಅನುಮತಿ ತ್ಯಾಗ** :- ವಿವಾಹ, ಉದ್ಯೋಗ, ವ್ಯವಹಾರಾದಿ ಲೌಕೀಕ ಕಾರ್ಯ, ಮನೆಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಅನುಮತಿ-ವಿಧಿ ನಿಷೇಧಗಳನ್ನು ಮಾಡದೆ ಬಾಳುವುದು.

11. **ಉದ್ದಿಷ್ಟತ್ಯಾಗಿ** :- ವಿರಕ್ತಭಾವನೆಯಿಂದ ಗೃಹವನ್ನು ತೊರೆದು ಮಂದಿರ-ಗುರುಗಳ ಸಂಘವನ್ನು ಸೇರುವುದು. ತನಗಾಗಿ ಮಾಡಿದ ಆಹಾರವನ್ನು ತೆಗೆದುಕೊಳ್ಳದಿರುವುದು. ಒಪ್ಪತ್ತು ಮಾತ್ರ ಶ್ರಾವಕರು ಕೊಟ್ಟ ಶುದ್ಧವಾದ ಆಹಾರವನ್ನು ಸೇವಿಸುವುದು.

ಹೀಗೆ ಮುಂದಿನ ನೆಲೆಗಳನ್ನು ಏರುವಾಗ ಹಿಂದಿನ ನೆಲೆಗಳ ನಿಯಮಗಳನ್ನೂ ಬಿಡದೆ ಪಾಲಿಸಬೇಕು.

ಉದ್ದಿಷ್ಟತ್ಯಾಗಿ ಎಂಬ ಹನ್ನೊಂದನೇ ನೆಲೆಯಲ್ಲಿ 2 ವಿಧವಿದೆ.



1) ಕ್ಷುಲ್ಲಕ 2) ಐಲಕ. **ಕ್ಷುಲ್ಲಕರು** - ಮನೆಯನ್ನು ತೊರೆದು ಮುನಿಸಂಘ ಸೇರಿ ಆಚಾರ್ಯರಿಂದ ಐಲಕ ಪದವಿ ಎಂಬ ದೀಕ್ಷೆ ತೆಗೆದುಕೊಳ್ಳಬೇಕು. ಅವರಿಗೆ ಕೌಪೀನ, ಹೊದಿಕೆ, ಊಟಕ್ಕೆ ತಟ್ಟೆ ಇರುತ್ತದೆ. ಒಪ್ಪತ್ತು ಶುದ್ಧವಾದ ಆಹಾರವನ್ನು ಕುಳಿತು ಊಟ ಮಾಡಬಹುದು. ಶಕ್ತಿ ಇದ್ದರೆ ಲೋಚು ಮಾಡಿಕೊಳ್ಳಬಹುದು. ಇಲ್ಲವೇ ಕತ್ತರಿಯಿಂದ ಕತ್ತರಿಸಿಕೊಳ್ಳಬಹುದು. ಇವರಿಗೂ ಪಿಂಛ-ಕಮಂಡಲು ಇರುತ್ತದೆ-ವಾಹನದಲ್ಲಿ ಓಡಾಡಬಹುದು. **ಐಲಕರು** – ಇವರಿಗೆ ಒಂದು ಕೌಪೀನ ಮತ್ತು ವಸ್ತ್ರ ಮಾತ್ರವಿರುತ್ತದೆ. ದಿನಕ್ಕೊಮ್ಮೆ ಮಾತ್ರ ಶ್ರಾವಕರು ನೀಡಿದ ಶುದ್ಧವಾದ ಆಹಾರವನ್ನು ನಿಂತು ಕೈಲಿ ಸ್ವೀಕರಿಸಬೇಕು. ಲೋಚು ಮಾಡಿಕೊಳ್ಳಬೇಕು. ವಾಹನತ್ಯಾಗವಿರುತ್ತದೆ. ಪಿಂಛ-ಕಮಂಡಲು ಇರುತ್ತದೆ. ಮಿಕ್ಕೆಲ್ಲಾ ಕ್ರಿಯೆಗಳೂ ಮುನಿಗಳಿಗಿದ್ದಂತೆಯೇ ಇರುತ್ತದೆ. ಇಲ್ಲಿಂದ ಮುಂದಿನ ಹಂತವೇ ಮುನಿಪದವಿ.

ಸ್ತ್ರೀಯರೂ ಈ ಹನ್ನೊಂದು ಹಂತಗಳನ್ನೇ ಪರಿಪಾಲಿಸಬಹುದು. ಹನ್ನೊಂದನೇ ನೆಲೆಯಲ್ಲಿ ಮನೆಯನ್ನು ತ್ಯಜಿಸಬೇಕು. ಕ್ಷುಲ್ಲಿಕಾ ದೀಕ್ಷೆ ಪಡೆದು ಸೀರೆ-ತಟ್ಟೆ ಒಂದು ಹೊತ್ತು ಊಟ, ಪಿಂಛ, ಕಮಂಡಲುಗಳನ್ನು ಉಪಯೋಗಿಸಬೇಕು. ನಂತರ ಆರ್ಯಿಕಾದೀಕ್ಷೆಯನ್ನು ತೆಗೆದುಕೊಂಡು ಉಡಲು ಸೀರೆಯನ್ನು ಉಪಯೋಗಿಸಬೇಕು. ಮಿಕ್ಕೆಲ್ಲಾ ಕ್ರಿಯೆಗಳೂ ಮುನಿಗಳಿಗಿದ್ದಂತೆಯೇ ಇರುತ್ತದೆ. ಗೃಹಸ್ಥರ ಮನೆಯಲ್ಲಿರಬಾರದು. ಮುನಿಗಳ ಸಂಘದಲ್ಲಿದ್ದು ಪ್ರತ್ಯೇಕ ವಸತಿಯಲ್ಲಿರಬೇಕು. ಏಕಾಂಗಿಗಳಾಗಿ ವಿಹರಿಸಬಾರದು. ಆರ್ಯಿಕೆಯರೂ ಉಪಚಾರದಿಂದ ಮಹಾವ್ರತಿಗಳೆನಿಸುತ್ತಾರೆ.

ಹೀಗೆ ಸಮ್ಯಗ್‌ದೃಷ್ಟಿಯಾದ ಶ್ರಾವಕನು ಅಷ್ಟಮೂಲಗುಣಗಳನ್ನು ಪಾಲಿಸುವವನು ಪಾಕ್ಷಿಕ ಶ್ರಾವಕನೆಂದೂ, ಮುಂದಿನ 5 ಅಣುವ್ರತ, 3 ಗುಣವ್ರತ ನಾಲ್ಕು ಶಿಕ್ಷ ವ್ರತಗಳನ್ನು ಪಾಲಿಸುವವನು ನೈಷ್ಠಿಕ ಶ್ರಾವಕನೂ ಮತ್ತು ಇವನೇ ಹನ್ನೊಂದೂ ಪ್ರತಿಮಾ ನೆಲೆಗಳನ್ನು ಪಾಲಿಸುವವನು. ಇವರೇ ಸಾಧಕ ಶ್ರಾವಕರೆನಿಸಿ. ಕೊನೆಯಲ್ಲಿ ಸಮಾಧಾನದಿಂದ ಸಲ್ಲೇಖನದಿಂದ ಸಮಾಧಿ ಮರಣ ಹೊಂದಬಹುದು. ಹೀಗೆ ಇವೆಲ್ಲಾ ಶ್ರಾಕವಕರ ಆತ್ಮೋನ್ನತಿಯ ಅಂತಸ್ತುಗಳೇ ಆಗಿವೆ.

# 77. ಧರ್ಮದಹಣದ ದುರುಪಯೋಗದ ದುಃಫಲ

'ಧರ್ಮದಿಂದಾದು ಸಿರಿ' ಎಂದು ಉತ್ತಮರು ಸುಖದ ಬಾಳುವೆಯನ್ನು ಮಾಡುತ್ತಾ ಇದಕ್ಕಿಂತಲೂ ಮಿಗಿಲಾದ ಸುಖಶಾಂತಿ ನೆಮ್ಮದಿಯ ಅಪೇಕ್ಷೆಯಿಂದ ತಮ್ಮ ಸಿರಿ, ಸಂಪದ, ದುಡಿಮೆಯಲ್ಲಿ ಸ್ವಲ್ಪಭಾಗವನ್ನು ಧಾನ ಧರ್ಮ ಪರೋಪಕಾರಕ್ಕೆ ವ್ಯಯ ಮಾಡುತ್ತಾರೆ. ಇದು ಧಾರ್ಮಿಕರ ಲಕ್ಷಣ.

ನ್ಯಾಯದಿಂದ ತಾವು ಸಂಪಾದಿಸಿದ ಹಣದಲ್ಲಿ ತಮ್ಮ ಸಂಸಾರಕ್ಕಾಗಿ, ತಮ್ಮ ವ್ಯಾಪಾರ ವ್ಯವಹಾರಕ್ಕಾಗಿ, ಉದ್ಯೋಗ ವಹಿವಾಟಿಗಾಗಿ ಮತ್ತು ತಮ್ಮ ಮುಂದಿನ ಪೀಳಿಗೆಗಾಗಿ ಸಾಕಷ್ಟು ಹಣವನ್ನು ಖರ್ಚು ಮಾಡುವುದರೊಂದಿಗೆ ಸ್ವಲ್ಪ ಹಣವನ್ನು ಮರೆಯದೆ ದಾನ, ಧರ್ಮ, ಧರ್ಮ ಪ್ರಚಾರ, ಧರ್ಮಪ್ರಭಾವನೆ, ಪೂಜೆ, ಧರ್ಮಗ್ರಂಥ ಪ್ರಕಟಣೆ, ಜಿನಮಂದಿರ ಜೀರ್ಣೋದ್ಧಾರ, ಅನಾಥಾಶ್ರಮ, ವೃದ್ಧಾಶ್ರಮ, ಔಷಧ ದಾನ, ಆಹಾರದಾನ, ವಿದ್ಯಾಮಂದಿರ, ದೀನದಲಿತರಿಗೆ ಸಹಾಯ ಮುಂತಾದ ಕಾರ್ಯಗಳಿಗಾಗಿ ನೀಡಿದ ಧರ್ಮ ದ್ರವ್ಯ ವನ್ನು ದುರ್ವ್ಯಯ ಮಾಡಿದರೆ ಒಂದಲ್ಲ ಒಂದು ರೀತಿಯಲ್ಲಿ ಲತ್ತೆ, ಹಾನಿ, ದುಃಖ ದುರಿತಾದಿಗಳು, ಕಷ್ಟ ನಷ್ಟಗಳು ಆಗಿಯೇ ತೀರುತ್ತದೆ. ಧರ್ಮದಹಣ ನಿರ್ಮಾಲ್ಯವಿದ್ದಂತೆ ಅದು ದುರುಪಯೋಗವಾಗಬಾರದು. ಏಕೆಂದರೆ ಧರ್ಮಕಂಟಕನಾಗಿ, ಧರ್ಮಪ್ರಭಾವನೆಗೆ ಅಂತರಾಯ ಮಾಡುವುದರಿಂದ ಅಧರ್ಮವೆನಿಸಿ ಅದರಿಂದ ದುಃಖ ಅಶಾಂತಿ ಮುಂತಾದ ಅನಾಹುತ ಗಳುಂಟಾಗುತ್ತವೆ. ಧರ್ಮ ಕಾರ್ಯಗಳಿಗೆಂದೇ ಮೀಸಲಿಟ್ಟ ಹಣ ದುರ್ವ್ಯಯ ಮಾಡಿದರೆ ಇಹಪರದಲ್ಲಿ ದುಃಖ ಪ್ರಾಪ್ತವಾಗುವುದು. ಇಂತಹವರು ಧರ್ಮ ಕಂಟಕರಾಗಿರುತ್ತಾರೆ. ಅಪಹರಣದ, ಕಳ್ಳತನದ ದೋಷ ಉಂಟಾಗುತ್ತದೆ. ಮೋಸ ಮಾಡಿದಂತಾಗುತ್ತದೆ. ಭವ ಭವಗಳಲ್ಲಿ ದುಃಖಭಾಜನ ನಾಗಬೇಕಾಗುತ್ತದೆ. ದಾನ ಕೊಟ್ಟ ಹಣ ದೇವರ ದುಡ್ಡು, ಪವಿತ್ರವಾದುದು. ಅದನ್ನು ಪಡೆದವರು ಅದನ್ನು ಸದುಪಯೋಗ ಮಾಡಬೇಕು.

ಹೀಗೆ ಧರ್ಮದ ಹಣವನ್ನು ಅಪವ್ಯಯ ಮಾಡಿದುದರಿಂದಾದ ಫಲವನ್ನು ತಿಳಿಸುವ ಒಂದು ಉದಾಹರಣೆಯು ನೇಮಿನಾಥಪುರಾಣದಲ್ಲಿ ದೊರೆಯುತ್ತದೆ. ಇದು ಈ ವಿಷಯದಲ್ಲಿ ತುಂಬಾ ಬೋಧಪ್ರದವಾದ ನಿದರ್ಶನ.



ಹಿಂದೆ ಸಾಕೇತನಗರದಲ್ಲಿ ಜಿನೇಂದ್ರದತ್ತನೆಂಬ ವರ್ತಕನಿದ್ದನು. ನಿತ್ಯಪೂಜೆ ಮತ್ತು ಧರ್ಮಪ್ರಭಾವನೆಗೆಂದು ದಾನ ಧರ್ಮವನ್ನು ಮಾಡುತ್ತಿದ್ದನು. ಒಮ್ಮೆ ಆತ ವ್ಯಾಪಾರಕ್ಕೆಂದು ಸಮುದ್ರದ ಆಚೆಗಿನ ದೇಶಗಳಿಗೆ ಹೋಗ ಬೇಕಾಗಿ ಬಂತು. ಆದರೆ ತಾನು ತಪ್ಪದೆ ನಡೆಸಿಕೊಂಡು ಬರುತ್ತಿದ್ದ ಧರ್ಮ ಕಾರ್ಯಗಳು ನಡೆಯಬೇಕೆಂದು ತನ್ನ ಮಿತ್ರನೂ, ಧರ್ಮದರ್ಶಿಯೂ ಆಗಿದ್ದ ರುದ್ರಮಿತ್ರನೆಂಬುವನಿಗೆ 12 ವರ್ಷಗಳಿಗೆ ಆಗುವಷ್ಟು ಹಣವನ್ನು ಕೊಟ್ಟು ತಾನು ಬರುವವರೆಗೂ ಧರ್ಮಕಾರ್ಯಗಳನ್ನು ತಪ್ಪದೆ ನಡೆಸಿಕೊಂಡು ಹೋಗಬೇಕೆಂದು ಹೇಳಿ ಹೋದನು.

ಅತ್ತ ಜಿನೇಂದ್ರದತ್ತ ಹೋದುದೇ ತಡ, ಇತ್ತ ರುದ್ರದತ್ತನು ''ಧರ್ಮವಂತೆ ಧರ್ಮ. ಅದೆಲ್ಲಿದೆ ಈಗ ಅನಾಯಾಸವಾಗಿ ಸಿಕ್ಕಿರುವ ಈ ಹಣದಿಂದ ನಾನು ನನ್ನ ಕುಟುಂಬ ಸುಖವಾಗಿರುವುದು ಬಿಟ್ಟು ಧರ್ಮಕ್ಕೆ ಖರ್ಚು ಮಾಡಿದರೇನು ಬಂತು'' ಎಂದು ಆ ಧರ್ಮದ ಹಣವನ್ನು ದುರ್ವ್ಯಯ ಮಾಡಲಾರಂಭಿಸಿದನು. ತನ್ನ ಸ್ವಾರ್ಥಕ್ಕಾಗಿ ದುರ್ವ್ಯಸನಗಳಿಗಾಗಿ ಖರ್ಚು ಮಾಡಲಾರಂಭಿಸಿದನು. ಹೀಗೆ ಹಣವನ್ನೆಲ್ಲಾ ಕೆಲವೇ ದಿನಗಳಲ್ಲಿ ಮುಗಿಸಿಬಿಟ್ಟನು. ಕೊನೆಗೆ ಕಳ್ಳತನ ಮಾಡಲಾರಂಭಿಸಿದನು. ದೇವರ ದುಡ್ಡನ್ನು, ಮೀಸಲು ಹಣವನ್ನು ದುರುಪಯೋಗಿ ಮಾಡಿದನು. ಒಮ್ಮೆ ಕಳ್ಳತನ ಮಾಡುತ್ತಿರುವಾಗ ಆ ನಗರದ ಕೊತ್ವಾಲನಿಗೆ ಸಿಕ್ಕಿಬಿದ್ದನು. ಅವನ ಹೊಡೆತಕ್ಕೆ ಗುರಿಯಾಗಿ ಸತ್ತುಹೋದನು. ದುರ್ವ್ಯಸನಿಯಾದ ಅವನು ದುರ್ಮರಣ ಹೊಂದಿ ದುರ್ಗತಿಗೆ ಹೋದನು. ಆತ ಏಳನೇ ನರಕದಲ್ಲಿ ಜನ್ಮ ತಾಳಿ 33 ಸಾಗರೋಪಮಕಾಲ ಅಸಾಧ್ಯವಾದ ದುಃಖವನ್ನು ಅನುಭವಿಸಿ ಅಲ್ಲಿಂದ ಬಂದು ಲವಣ ಸಮುದ್ರದಲ್ಲಿ ಮಹಾ ತಿಮಿಂಗಲವಾಗಿ ಹುಟ್ಟಿದನು. ಅಲ್ಲಿಯೂ ದುಃಖಿಯಾಗಿ ಸತ್ತು ಮತ್ತೆ ಆರನೇ ನರಕದಲ್ಲಿ ಹುಟ್ಟಿದನು. ಅಲ್ಲಿ ಇಪ್ಪತ್ತೆರಡು ಸಾಗರೋಪಮಕಾಲ ದುಃಖವನ್ನು ಅನುಭವಿಸಿ ಮತ್ತೆ ಮೀನಾಗಿ ಹುಟ್ಟಿ ಅಲ್ಲಿ ಸತ್ತು ನಾಲ್ಕನೇ ನರಕದಲ್ಲಿ ಹುಟ್ಟಿದನು. ಹೀಗೆ ಎಡೆಬಿಡದೆ ನರಕ-ತಿರ್ಯಂಚ ಗತಿಗಳಲ್ಲಿ ಹುಟ್ಟಿ ಸತ್ತು ಬಹು ಯಾತನೆಯನ್ನು ಅನುಭವಿಸಿದನು.

ಹೇಗೋ ಕರ್ಮದ ಉಪಶಮದಿಂದ ಒಂದು ಅಗ್ರಹಾರದಲ್ಲಿ ಓರ್ವ ಗರೀಬ ದಂಪತಿಗಳಿಗೆ ಗೌತಮನೆಂಬ ಮಗನಾಗಿ ಜನಿಸಿದನು. ಇವನು ಹುಟ್ಟಿದ ದೆಸೆಯಿಂದ ತಂದೆತಾಯಂದಿರು ಯಾವುದೋ ಸೋಂಕು ರೋಗಕ್ಕೆ ತುತ್ತಾಗಿ ಸತ್ತುಹೋದರು. ಗೌತಮನು ಅನಾಥನಾಗಿ ಬೀದಿಪಾಲಾದನು. ಜನರು ತಿಂದು ಬಿಸಾಡಿದ ಎಂಜಲೆಲೆಯಮೇಲಿದ್ದ ಅನ್ನದ ಅಗುಳನ್ನು ಆರಿಸಿ ತಿಂದು ಅಲೆಯುತ್ತಿದ್ದನು. ಜನರು ಅವನನ್ನು ನಾಯನ್ನು ಗದರಿ ಅಟ್ಟುವಂತೆ ಹೀನಾಯವಾಗಿ ಬೈದು ಓಡಿಸುತ್ತಿದ್ದರು.

ಹೀಗೆ ಕಾಲಯಾಪನೆ ಮಾಡುತ್ತಿದ್ದಾಗ ಒಂದು ದಿನ ಸಮುದ್ರಸೇನರೆಂಬ ಮುನಿಗಳು ಕಾಡಿನ ಕಡೆಯಿಂದ ಆಹಾರಕ್ಕೆಂದು ಆ ಊರ ಒಂದು ಬೀದಿಯಲ್ಲಿ ಬರುತ್ತಿರುವುದನ್ನು ಗೌತಮನು ಕಂಡನು. 'ಅಯ್ಯೋ ಇವರು ನನಗಿಂತ ಬಡವರು, ಇವರ ಮೈಮೇಲೆ ಒಂದು ಚಿಂದಿ ಬಟ್ಟೆಯೂ ಗತಿ ಇಲ್ಲ' ಎಂದು ಕೊಂಡು ಅವರ ಹಿಂದೆಯೇ ಹೊರಟನು. ಅಲ್ಲಿ ಒಂದು ಶ್ರೀಮಂತನ ಮನೆಯ ಮುಂದೆ ಆ ಮುನಿಗಳನ್ನು ವಿಧಿಪೂರ್ವಕವಾಗಿ ತಡೆದು ಒಳಗೆ ಕರೆದೊಯ್ದು ಆಹಾರ ನೀಡಿದರು. ಅದನ್ನು ನೋಡುತ್ತಿದ್ದ ಗೌತಮನಿಗೆ ಆಶ್ಚರ್ಯವಾಯಿತು. ಆ ಮುನಿಗಳಿಗೆ ಜನರು ಮಾಡುತ್ತಿದ್ದ ಭಕ್ತಿ ಗೌರವ, ಜಯಕಾರ, ಪೂಜೆ- ನಮೋಸ್ತುಗಳನ್ನು ಕಂಡು ಚಕಿತನಾದನು. ಅನಾಥನಾಗಿ ನಿಂತಿದ್ದ ಅವನನ್ನು ಕಂಡು ಮುನಿಗಳು ಆ ಹುಡುಗನಿಗೂ ಆಹಾರ ನೀಡುವಂತೆ ಆ ಶ್ರೀಮಂತನಿಗೆ ಹೇಳಿದರು. ಇವನು ಆ ಸ್ವಾಮಿಗಳ ಶಿಷ್ಯನಿರಬೇಕೆಂದು ಮನ್ನಿಸಿ ಮೃಷ್ಟಾನ್ನ ಭೋಜನ ನೀಡಿದರು. 'ಸಾಧೂನಾಂ ದರ್ಶನಂ ಪುಣ್ಯ' ಎಂಬಂತೆ ಜಿನಮುನಿಗಳ ದರ್ಶನದಿಂದ ಅವನ ಕರ್ಮದ ಉಪಶಮನವಾಯಿತು. "ಆಹಾ ಈ ಮುನಿಗಳು ಮಹಾತ್ಮರು. ಕರುಣಾಳುಗಳು, ಅನಾಥ ರಕ್ಷಕರು, ದೀನದಯಾಳುಗಳು" ಎಂದು ಅಂದುಕೊಂಡು ಆ ಮುನಿಗಳು ಹೋಗುವಾಗ ಅವರ ಕಮಂಡಲುವನ್ನು ತೆಗೆದುಕೊಂಡು ಅವರ ಹಿಂದೆ ಹೊರಟನು. ಅವರು ಬೀಡುಬಿಟ್ಟಿದ್ದ ಮಂದಿರಕ್ಕೆ ಹೋಗಿ ವಿನಯದಿಂದ ನಮಸ್ಕರಿಸಿದನು. ಆ ಮುನಿಗಳು ಅವಧಿಜ್ಞಾನಧಾರಿಗಳಾಗಿದ್ದರು. ಅವರು ಅವನ ಹೆಸರನ್ನು ಹಿಡಿದು ಕರೆದು ಅವನಿಗೆ ಹರಸಿದರು. ಗೌತಮನು ಅವರ ಸೇವೆ ಮಾಡಿದನು. ತನಗೆ ಈ ಅನಾಥ ಸ್ಥಿತಿ ಬಂದ ಕಾರಣ ವೇನು ಸ್ವಾಮಿ ಎಂದು ಕೇಳಿದನು.

ಆ ಪೂಜ್ಯರು ಗೌತಮನ ಹಿಂದಿನ ಭವಗಳ ಏಳು ಬೀಳುಗಳನ್ನು ತಮ್ಮ ಅವಧಿಯಿಂದ ತಿಳಿದು ಅವನ ಭವಾವಳಿಯನ್ನು ತಿಳಿಸುತ್ತಾ, ಅಯ್ಯಾ! ನೀನು ಹಿಂದೆ ರುದ್ರದತ್ತನಾಗಿದ್ದಾಗ ಧರ್ಮಾತ್ಮನಾಗಿದ್ದ ಜಿನೇಂದ್ರದತ್ತನು ನೀಡಿದ್ದ ಧರ್ಮದಹಣವನ್ನು ದುರ್ವ್ಯಯ ಮಾಡಿ ಧರ್ಮಕಾರ್ಯಗಳನ್ನು ಮಾಡದೆ ಇದ್ದುದರಿಂದ ನೀನು ನರಕ ತಿರ್ಯಂಚ ಗತಿಯಲ್ಲಿ ಹುಟ್ಟಿ ಸತ್ತು ಬಹು ದುಃಖವನ್ನು ಅನುಭವಿಸಿದೆ. ಈಗಲೂ ನೀನು ಅನಾಥನಾಗಿದ್ದೀಯೆ. ಜಿನೇಂದ್ರದತ್ತನು ವ್ಯಾಪಾರದಿಂದ ಹಿಂದಿರುಗಿ ಬಂದು ನಿನ್ನ ವೃತ್ತಾಂತವನ್ನು ಕೇಳಿ, ನೀನು ಮಾಡಿದ ಅನ್ಯಾಯ, ಧರ್ಮದ್ರೋಹದ ವಿಷಯವನ್ನು ಕೇಳಿ ಮನ ನೊಂದನು. ತನ್ನ ಶ್ರೀಮಂತಿಕೆಯ ಬಹುಪಾಲನ್ನು ಧರ್ಮಪ್ರಭಾವನೆಗೆಂದು ಆ ಊರಿನ ರಾಜನಲ್ಲಿ ಪುದುವಟ್ಟು ಇಟ್ಟು ಕೊನೆಯಲ್ಲಿ ವೈರಾಗ್ಯ ಹೊಂದಿ ಮುನಿಯಾಗಿ ಸಮಾಧಿಮರಣ



ಹೊಂದಿ ಸದ್ಗತಿ ಹೊಂದಿದನು. ಮತ್ತೆ ಕೆಲವೆರಡು ಭವಗಳಲ್ಲಿ ಕರ್ಮಕ್ಷಯ ಮಾಡಿ ಮುಕ್ತನಾದನು. ಆದರೆ ಅದೇ ಧರ್ಮದ್ರವ್ಯದ ಅಪವ್ಯಯ ಮಾಡಿದ ನೀನು ದುರ್ಗತಿ ಹೊಂದಿ ದುಃಖಿಯಾದೆ ಎಂದರು. ಗೌತಮನು ತನ್ನ ಭವಾವಳಿಯನ್ನು ಕೇಳಿ ಬೆಚ್ಚಿಬಿದ್ದು ತನ್ನ ತಪ್ಪಿಗಾಗಿ ಪಶ್ಚಾತ್ತಾಪಪಟ್ಟನು. ಅವನು ಬಹುಕಾಲ ಆ ಮುನಿಗಳ ಜೊತೆಯಲ್ಲಿಯೇ ಇದ್ದು ಅವರ ಸೇವಾ ಶುಶ್ರೂಷಾ ಕಾರ್ಯದಲ್ಲಿ ತೊಡಗಿದ್ದು ಸದ್ಧರ್ಮ ಪಾರಾಯಣನಾದನು. ಆ ಮುನಿಗಳಿಂದಲೇ ದೀಕ್ಷೆಯನ್ನು ತೆಗೆದುಕೊಂಡು ತಪೋನಿರತನಾಗಿ ಸಮಾಧಿ ಮರಣ ಹೊಂದಿ ಮಧ್ಯಮಗ್ರೈವೇಯಿಕ ಸ್ವರ್ಗದಲ್ಲಿ ಅಹಮಿಂದ್ರ ದೇವನಾಗಿ ಇಪ್ಪತ್ತೆಂಟು ಸಾಗರೋಪಮಕಾಲ ಸುಖವನ್ನು ಅನುಭವಿಸಿದನು.

ಇತ್ತ ಜಂಬೂದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಉತ್ತರ ಭಾಗದಲ್ಲಿ ಸೂರ್ಯಪುರ ಅಥವಾ ಶೌರೀಪುರ ಪಟ್ಟಣದಲ್ಲಿ ಶೂರನೆಂಬ ರಾಜನಿದ್ದನು ಮೇಲ್ಕಂಡ ನವಗ್ರೈವೇಕ ಸ್ವರ್ಗ ಅಹಮಿಂದ್ರ ಅಂದರೆ ಹಿಂದೆ ರುದ್ರದತ್ತನ ಆತ್ಮವು ಸ್ವರ್ಗದ ಆಯುವು ತೀರಿದಬಳಿಕ ಈ ಶೂರನೆಂಬ ರಾಜನಿಗೆ ಅಂಧಕವೃಷ್ಟಿ ಎಂಬ ಮಗನಾದನು. ಈತನ ಪತ್ನಿ ಸುಭದ್ರೆ, ಈ ದಂಪತಿಗಳಿಗೆ ಸಮುದ್ರ ರಾಜನೇ ಮೊದಲಾಗಿ ವಸುದೇವನೇ ಕೊನೆಯಾಗಿ ಹತ್ತು ಮಂದಿ ಗಂಡುಮಕ್ಕಳೂ ಕುಂತಿ ಮತ್ತು ಮಾದ್ರಿ ಎಂಬ ಹೆಣ್ಣುಮಕ್ಕಳಾದರು. ಸಮುದ್ರ ವಿಜಯನ ಸುಕುಮಾರನೇ ಭಗವಾನ್ ನೇಮಿನಾಥರು. ವಸುದೇವನ ಪುತ್ರರೇ ಕೃಷ್ಣ ಬಲರಾಮರು. ಕುಂತಿ ಮಾದ್ರಿಯರ ಮಕ್ಕಳೇ ಪಾಂಡವರು.

ಹೀಗೆ ಧರ್ಮದ್ರವ್ಯದ ಅಪವ್ಯಯದಿಂದ ದುರ್ಗತಿಗೆ ಸಾಗಿ ದುಃಖವನ್ನು ಅನುಭವಿಸಬೇಕಾಗುವುದೆಂದೂ ಧರ್ಮಸಾಧನೆಯಿಂದ ಸ್ವರ್ಗಾದಿಮೋಕ್ಷ ಲಭಿಸುವುದೆಂದೂ ತಿಳಿಸುವ ಈ ನಿದರ್ಶನದಿಂದ ಧಾರ್ಮಿಕರ ಜಾಗೃತರಾಗಿ ಧರ್ಮಕ್ಕಾಗಿ ದಾನರೂಪದಲ್ಲಿ ಬಂದ ಹಣ, ದ್ರವ್ಯ-ವಸ್ತುಗಳನ್ನು ದುರ್ವ್ಯಯ ಮಾಡದೆ ಸದುಪಯೋಗ ಮಾಡಿ ಧರ್ಮಾತ್ಮರ-ಧರ್ಮದ ಪರಂಪರೆಯನ್ನು ಉಳಿಸಿ ಬೆಳೆಸಬೇಕು. ಮೀಸಲು ಹಣವನ್ನು ದುರ್ವ್ಯಯ ಮಾಡಬಾರದು.

# 78. ಇಂದು ನಮಗೆ ಎಂತಹ ವಿದ್ಯೆ ಬೇಕು?

ಬುದ್ಧಿಯ ವಿಕಾಸ, ಮಾನಸಿಕ ಶಕ್ತಿ, ಒಳ್ಳೆಯ ಶಿಸ್ತು, ಸ್ವಾವಲಂಬನೆ ಮತ್ತು ಶೀಲ ಸಂಯಮ ಹಾಗೂ ದುಡಿಮೆಯ ಮಾರ್ಗಗಳು ಯಾವ ಅಭ್ಯಾಸದಿಂದ ಬೆಳೆದು ಬರುವಂತೆ ಮಾಡುವುದೋ ಅಂತಹ ವಿದ್ಯೆ ಅತ್ಯವಶ್ಯಕವಾಗಿ ಬೇಕು. ಈ ಗುಣಗಳು ಮಾನವನಲ್ಲಿ ಮೂಡಿಬರುವಂತೆ ಮಾಡುವ ಪ್ರಯೋಜನವೇ ವಿದ್ಯೆ. ವಿದ್ಯೆ ಎಂದರೆ ಕೇವಲ ಅಕ್ಷರಸ್ಥನಾಗುವುದು ಎಂಬ ಸಂಕುಚಿತಾರ್ಥದಲ್ಲಿ ಸೀಮಿತವಾಗಿಲ್ಲ. ಅಜ್ಞಾನವನ್ನು ದೂರ ಮಾಡಿ ಸುಜ್ಞಾನವನ್ನು ತುಂಬುವ, ಅನ್ಯಾಯ, ಅನಾಚಾರಗಳನ್ನು ತೊಲಗಿಸಿ ನ್ಯಾಯ ಸಮ್ಮತವಾದ ಸದಾಚಾರದಿಂದ ನಡೆಯುವಂತೆ ಮಾಡುವ, ಹೇಡಿತನ, ಸೋಮಾರಿತನ, ಆಲಸ್ಯಗಳನ್ನು ಓಡಿಸಿ ಕರ್ತವ್ಯಶೀಲತೆಯನ್ನು ಜಾಗ್ರತಗೊಳಿಸುವ, ಅಹಂಕಾರ-ಆಡಂಬರಗಳನ್ನು ಓಡಿಸಿ ನಿಗರ್ವತೆ, ಸರಳತೆ, ಸಾತ್ವಿಕತೆಯನ್ನು ಉಂಟುಮಾಡುವ, ಕಾಠಿಣ್ಯತೆ-ಕ್ರೌರ್ಯಗಳನ್ನು ಬಿಡಿಸಿ ಮೃದುತ್ವ-ಸಭ್ಯತೆಯನ್ನು ಬೆಳೆಸುವ, ಅಭ್ಯಾಸವೇ ವಿದ್ಯಾಭ್ಯಾಸ. ಯಾವುದಕ್ಕೂ ಜಗ್ಗದ ಇಚ್ಛಾಶಕ್ತಿಯನ್ನು ಸ್ವಾಧೀನ ಮಾಡಿ ಕೊಂಡು ಅದರ ಸದುಪಯೋಗ ಮಾಡುವ ಅಭ್ಯಾಸವೇ ವಿದ್ಯಾಭ್ಯಾಸ. ಇಂತಹ ಸರ್ವತೋಮುಖವಾದ ಅಭ್ಯುದಯಕ್ಕೆ ಸಾಧನವಾದಂತಹ ವಿದ್ಯಾಭ್ಯಾಸ ನಮಗೆ ಬೇಕು.

ಈ ಗುರಿಸಾಧನೆಗೆ ಅನುಗುಣವಾದ ಅಧ್ಯಯನಕ್ರಮವು ರೂಪಿತವಾಗ ಬೇಕು. ಇದಕ್ಕೆ ಕಲಿಯುವವರ, ಕಲಿಸುವವರ, ಪೋಷಕರ ಹೊಣೆಗಾರಿಕೆಯು ನಮ್ಮೆಲ್ಲರ ಮೇಲಿದೆ. ಇಲ್ಲಿ ಯಾರೊಬ್ಬರು ನಿರ್ಲಕ್ಷ್ಯ ತಾಳಿದರೂ ವಿದ್ಯಾಭ್ಯಾಸದ ಗುರಿ ಸಾಧ್ಯವಾಗುವುದಿಲ್ಲ.

ವಿದ್ಯಾರ್ಥಿಯ ಕ್ರಿಯಾಶಕ್ತಿ, ಜ್ಞಾನಶಕ್ತಿಯನ್ನು ಹೆಚ್ಚಿಸುವ ಜವಾಬ್ದಾರಿಯು ಶಿಕ್ಷಕರ, ಪಾಲಕರ ಮತ್ತು ವ್ಯವಸ್ಥಾಪಕರ ಮೇಲಿದೆ. ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳ ಬೆಳವಣಿಗೆಯಲ್ಲಿ ಧಾರ್ಮಿಕ, ನೈತಿಕ ಛಾಯೆ ಇದ್ದಲ್ಲಿ ವೈಜ್ಞಾನಿಕ ಕ್ರಮವಿದ್ದಲ್ಲಿ ಮೇಲ್ಕಂಡ ಗುಣಗಳು ವಿದ್ಯಾರ್ಥಿಯಲ್ಲಿ ವಿಕಸಿತವಾಗುತ್ತವೆ. ಕಲಿಕೆಯಲ್ಲಿ ವಿದ್ಯಾರ್ಥಿ, ಶಿಕ್ಷಕ, ಪೋಷಕ ಎಂಬುವರು ಜೊತೆ ಜೊತೆಗೇ ಸಾಗಬೇಕು. ಅದಕ್ಕೆ ತಕ್ಕಂತಹ ವಾತಾವರಣವು, ವರ್ತನೆ, ಪರಿಸರಗಳು ಮನೆಯಲ್ಲಿ-ಶಾಲೆಯಲ್ಲಿ



ಮತ್ತು ಹೊರಗಡೆ ಇದ್ದರೆ ವಿದ್ಯಾಭ್ಯಾಸವು ಸಫಲವಾಗುತ್ತದೆ.

ಜೀವಮಾತ್ರದವರಿಗೆಲ್ಲಾ ಜ್ಞಾನವು ಸ್ವಾಭಾವಿಕವಾದುದು. ಅದರಲ್ಲೂ ಮಾನವನಿಗೆ ಜ್ಞಾನವು ಹೆಚ್ಚು ವಿಕಸಿತವಾಗಿರುತ್ತದೆ. ಯಾವ ಜ್ಞಾನಶಕ್ತಿಯನ್ನೂ ಹೊರಗಿನಿಂದ ತುಂಬುವುದಲ್ಲ, ಅದು ಜೀವಿಯಲ್ಲಿಯೇ ಇರುವ ಮೂಲಗುಣ. ಈ ಮೂಲಗುಣವಾದ ಜ್ಞಾನ ದರ್ಶನ, ಚೇತನವೇ ಆತ್ಮ. ಅಂದರೆ ಯಾವುದಕ್ಕೆ ನೋಡುವ, ತಿಳಿಯುವ ಶಕ್ತಿ ಇದೆಯೋ ಅದೇ ಆತ್ಮ. ಈ ಆತ್ಮನಲ್ಲಿರುವ ಈ ಶಕ್ತಿಯನ್ನು ವಿಕಸನಗೊಳಿಸುವುದೇ ವಿದ್ಯಾಭ್ಯಾಸದ ಕಾರ್ಯವಾಗಿದೆ. ಈ ವಿಕಸನಕ್ರಮವನ್ನು ಅರಿತಿರಬೇಕಾದುದು ಶಿಕ್ಷಕನ ಹೊಣೆಯಾಗಿದೆ. ಅದಕ್ಕೆ ಮಾರ್ಗದರ್ಶಕಸೂಚಿಯೇ ಪಾಠ ಪ್ರವಚನ. ಇದು ಪಾರಮಾರ್ಥಿಕವಾಗಿಯಾಗಲೀ, ಲೌಕೀಕವಾಗಿಯಾಗಲೀ ರೂಪಿಸಿಕೊಂಡು ವಿದ್ಯಾರ್ಥಿಯ ಜ್ಞಾನದ, ಅರಿವಿನ ಕ್ರಿಯೆಯ, ತಿಳಿಯುವ ಶಕ್ತಿಯನ್ನು ವಿಕಾಸಗೊಳಿಸಬೇಕು. ಈ ಶಕ್ತಿಯ ಅನಾವರಣ ಮಾಡಲು ಬೇಕಾದ ಸ್ಪಷ್ಟವಾದ, ಆದರ್ಶವಾದ ಸಾಧನೆ, ಸಲಕರಣೆಗಳನ್ನು ಶಿಕ್ಷಕ ಹೊಂದಿರಬೇಕು. ಇದಕ್ಕೆ ಬೇಕಾದ ತರಬೇತಿಯನ್ನು ಆತ ಹೊಂದಿರಬೇಕು.

ಏನೋ ಒಂದಿಷ್ಟು ಕಲಿತರಾಯಿತು ಎಂದು ವಿದ್ಯಾರ್ಥಿಯಾಗಲೀ, ಏನೋ ಒಂದಿಷ್ಟು ಹೇಳಿಬಿಟ್ಟರಾಯಿತು ಎಂದು ಶಿಕ್ಷಕನಾಗಲೀ, ಏನೋ ಒಂದಿಷ್ಟು ನಮ್ಮ ಮಕ್ಕಳು ಕಲಿತರಾಯಿತು ಎಂದು ಪೋಷಕರಾಗಲೀ ಉದಾಸೀನತೆಯನ್ನು ತಾಳಿದರೆ ವಿದ್ಯಾಭ್ಯಾಸದ ನೈಜ ಗುರಿ ಸಫಲವಾಗುವುದಿಲ್ಲ. ತಮ್ಮ ಜವಾಬ್ದಾರಿ ಮುಗಿಯಲಿಲ್ಲ. ಮೂವರೂ ಒಮ್ಮುಖವಾಗಿ ಪ್ರಯತ್ನಿಸಿದರೆ, ಕಲಿಕೆ ಮತ್ತದರ ಫಲ ಕೈಗೂಡುವುದು, ಕರ್ತವ್ಯಪ್ರಜ್ಞೆಯು ಈ ಕಲಿಕೆಯಿಂದಾಗಬೇಕು.

ಇಂದು ಹೊರಗಿನ ವಾತಾವರಣವು ಹದಗೆಟ್ಟಿದೆ. ಎಲ್ಲಿ ನೋಡಿದರೂ ಅನ್ಯಾಯ, ಅತ್ಯಾಚಾರ, ಕೊಲೆ-ಸುಲಿಗೆ, ಭ್ರಷ್ಟಾಚಾರ, ಅಸಮಾನತೆ, ಬಡತನ, ಸ್ವಾರ್ಥ, ಅನೈತಿಕತೆ, ಕಳ್ಳತನ, ಮೋಸ, ದುರಾಕ್ರಮಣ, ದುರಾಭ್ಯಾಸ, ದುಷ್ಟ ಪದ್ಧತಿ, ಜಾತೀಯತೆ, ದುರಭಿಮಾನಗಳು ತುಂಬಿ ತುಳುಕಾಡುತ್ತಿವೆ. ಇದಕ್ಕೆಲ್ಲಾ ನೈತಿಕ ಶಿಕ್ಷಣವಿಲ್ಲದುದೇ ಕಾರಣವಾಗಿದೆ. ನೈತಿಕ ಶಿಕ್ಷಣದ ಅಭಾವವೇ ಹಲವು ಅನಾಹುತಗಳಿಗೆ ಕಾರಣವಾಗಿದೆ. ಆದ್ದರಿಂದ ಮನೆಯವರು ಅಂದರೆ ಪೋಷಕರು ಮಗುವಿನಲ್ಲಿ ನೈತಿಕ ಗುಣಗಳನ್ನು ಹೆಚ್ಚಿಸಬೇಕು. ತಾವು ಮೊದಲು ನೀತಿವಂತರಾಗಬೇಕು. ಮಗುವು ಮನೆಯಲ್ಲಿ ಮನೆಯವರಿಂದಲೇ ಹೆಚ್ಚು ಕಲಿಯುವುದಿದೆ. ಶಿಕ್ಷಕರೂ ನೀತಿ-ಧರ್ಮಗಳ ಗುಣವನ್ನು ಹೊಂದಿರಬೇಕು.

ಜ್ಞಾನವು ಮಾನವನಿಗೆ ಸ್ವಾಭಾವಿಕವಾದುದು. ಅದು ಸುಜ್ಞಾನವಾಗಬೇಕು. ಅದನ್ನು ರೂಪಿಸಿಕೊಳ್ಳಲು, ಅದಕ್ಕೆ ಮಾರ್ಗದರ್ಶನ ನೀಡುವ ಕ್ರಮವನ್ನು ಅರಿಯಬೇಕು. ಇದು ಪಾಠಪ್ರವಚನದಲ್ಲಿ ಸಮಾವೇಶವಾಗಬೇಕು. ಜನರಲ್ಲಿ, ವಿದ್ಯಾರ್ಥಿಗಳಲ್ಲಿ ಉತ್ತಮವಾದ ಆದರ್ಶಗಳು ಬೆಳೆದು ಬರುವಂತೆ ಮಾಡಬೇಕು. ಇದನ್ನು ಕೇವಲ ಪಾಠ ಹೇಳಿಕೊಡುವುದರಿಂದ ಬರುವುದಿಲ್ಲ. ಕಂಠಪಾಠ ಮಾಡುವುದರಿಂದ ಬರುವುದಿಲ್ಲ. ಅದು ಮನೆಯ, ಸಮಾಜದ ಮತ್ತು ಶಿಕ್ಷಕರ ನಡೆನುಡಿಯಿಂದ ಬರುತ್ತದೆ. ಅದಕ್ಕೆ ವಿದ್ಯಾರ್ಥಿಯ ಆಸಕ್ತಿಯೂ ಬೇಕು. ಇವೆಲ್ಲ ಒಂದಕ್ಕೊಂದು ಪೂರಕವಾಗಿ ಹಾಸುಹೊಕ್ಕಾಗಿರುತ್ತದೆ. ನೈತಿಕ-ಧಾರ್ಮಿಕ ಶಿಕ್ಷಣವು ಇಂದು ಪೋಷಕರಿಗೂ ಬೇಕು. ನಾಗರೀಕರಿಗೂ ಬೇಕು.

ಧೂಮಪಾನ ಕೆಟ್ಟದ್ದು ಎಂದಾಗಲೀ, ಮದ್ಯಪಾನ ಮಾಡಬಾರದೆಂದಾಗಲೀ, ಹಿಂಸೆ ಮಾಡಬಾರದೆಂದಾಗಲೀ, ಸುಳ್ಳು ಹೇಳಬಾರದೆಂದಾಗಲೀ ಹೇಳಿದರೆ ಮಾತ್ರ ಸಾಲದು. ಅದನ್ನು ತಾನು ಪಾಲಿಸಿದರೆ ಹೇಳುವ ಮಾತಿಗೆ ಶಕ್ತಿ ಬರುತ್ತದೆ. ಹೀಗೆ ಹೇಳಿದವರೇ ಮಗುವಿನಿಂದ ಬೀಡಿ ತರಿಸಿ ಅವನ ಎದುರಿಗೇ ಸೇದಿದರೆ ಬೀಡಿ ಸೇದಬಾರದು ಎಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ಇಂತಹ ಬಾಯಿಮಾತಿನ ಆದರ್ಶಗಳು ಕಂಠಶೋಷಣೆ ಆಗುವುದಷ್ಟೆ. ಪರಿಣಾಮ ಫಲಕಾರಿಯಾಗದು. ತನ್ನಲ್ಲಿ ಸದಾಚಾರ, ಆದರ್ಶಗಳ ಕೊರತೆಯಿಂದಲೇ ವಿದ್ಯಾಭ್ಯಾಸವು ಲೋಪವಾಗುತ್ತಿದೆ. ಇದಕ್ಕೆ ನೈತಿಕ, ಧಾರ್ಮಿಕ ನಡೆ ನುಡಿಯ ಅಭಾವವೇ ಕಾರಣವಾಗಿದೆ. ಆದ್ದರಿಂದ ಕಲಿಕೆಯಲ್ಲಿ ಭಾಷಾಬೋಧನೆಯಲ್ಲಿ, ವಿಜ್ಞಾನಬೋಧನೆಯಲ್ಲಿ ಗಣಿತ, ಸಮಾಜಶಾಸ್ತ್ರ ಮುಂತಾದವುಗಳಲ್ಲಿ ವಿದ್ಯಾರ್ಥಿಯ ಮನೋವಿಕಾಸ, ಜ್ಞಾನವಿಕಾಸವಾಗಿ ನೈತಿಕ ಮಟ್ಟವೂ ಹೆಚ್ಚಬೇಕು. ವಿಜ್ಞಾನಿಯಾಗಬೇಕು, ತಾಂತ್ರಿಕಜ್ಞನಾಗಬೇಕು. ವೈದ್ಯನಾಗಬೇಕು. ಭಾಷಾತಜ್ಞನಾಗಬೇಕು, ಸಾಹಿತಿಯಾಗಬೇಕು. ಜೊತೆಗೆ ಉತ್ತಮ ಮಾನವನಾಗಬೇಕು. ಅದಕ್ಕಾಗಿ ನೀತಿ ಬೋಧನೆ, ದೈಹಿಕ ಶಿಕ್ಷಣ, ಯೋಗ, ಧಾರ್ಮಿಕರ, ಆದರ್ಶವ್ಯಕ್ತಿಗಳ ಕಥೆಗಳ ಬೋಧನೆ ಆಗಬೇಕು. ಧಾರ್ಮಿಕನೂ, ಸ್ವಾವಲಂಬಿಯೂ ಆಗಬೇಕು.

ಸ್ಪಷ್ಟವಾದ ಆದರ್ಶವಾದ ಧ್ಯೇಯಗಳನ್ನೇ ನಾವು ಕಿರಿಯರೆದುರಿಗೆ ಇಡಬೇಕು. ಕಿರಿಯರಲ್ಲಿ ಕಾಣುವ ತಪ್ಪುಗಳನ್ನಷ್ಟೇ ಗಮನಿಸಿ ಅವನ್ನು ಬಯಲಿಗೆಳೆದು ನಿಂದಿಸಿ ಶಿಕ್ಷಿಸಿ ಅವಮಾನ ಪಡಿಸಬಾರದು. ಅವನಲ್ಲಿರುವ ಒಳ್ಳೆಯ ಗುಣವನ್ನು ಗಮನಿಸಿ ಮೆಚ್ಚಿಕೊಂಡು ಪ್ರೋತ್ಸಾಹ ನೀಡಬೇಕು. ಅವರಲ್ಲಿರುವ ಲೋಪ ದೋಷಗಳನ್ನು



ತಿದ್ದುವ ಮಾರ್ಗೋಪಾಯವನ್ನು ಅರಿತು ಕಲಿತಿರಬೇಕು. ಹೀಗಾದರೆ ಇಂದಿನ ಮಗು ಮುಂದಿನ ಆದರ್ಶ ಪ್ರಜೆಯಾಗಬಲ್ಲದು. ಉತ್ತಮ ಪ್ರಜೆಯಾಗಿ ಬಾಳಿ ಬೆಳಗಿ ತಾನೂ ಸುಖವಾಗಿದ್ದು, ಇತರರೂ ಸುಖವಾಗಿರಲು ಬಿಡುವವನಾಗಬೇಕಾದರೆ ಅದಕ್ಕೆ ತಕ್ಕಂತ ಶಿಕ್ಷಣ-ವಿದ್ಯಾಭ್ಯಾಸ ಅವಶ್ಯಕತೆ ಇಂದು ಅತ್ಯಗತ್ಯ. ಸೋಮಾರಿಯಾಗದೆ ದುಡಿದು ಜೀವನವನ್ನು ಮಾಡಬೇಕು. ತನ್ನ ಬಾಳು ಇತರರಿಗೆ ಹೊರೆಯಾಗಬಾರದು. ತನ್ನ ವಿದ್ಯೆ ಸಮಾಜಕಂಟಕವಾಗಬಾರದು.

## 79. ನೈತಿಕ ಶಿಕ್ಷಣದ ಅವಶ್ಯಕತೆ

ಜಗತ್ತಿನ ಜೀವರಾಶಿಗಳಲ್ಲಿ ಮಾನವ ಅತ್ಯಂತ ಶ್ರೇಷ್ಠನಾದವನು. ಎಲ್ಲಾ ಜೀವಿಗಳಿಗೂ ಆಹಾರ, ನಿದ್ರೆ, ಭಯ, ಮೈಥುನ ಎಂಬ ಅಪೇಕ್ಷೆಗಳು, ಸ್ವಭಾವಗಳು ಹುಟ್ಟಿನಿಂದಲೇ ಇರುತ್ತವೆ. ಬರೀ ಇಷ್ಟೇ ಕಾರ್ಯವು ಜೀವಿಗಳದ್ದಾದರೆ ಮಾನವನ ಜನ್ಮದ ಹೆಚ್ಚುಗಾರಿಕೆ ಏನು? ಅದೇನೆಂದರೆ ಮತ್ತಿತರ ಜೀವಿಗಳಿಗೆ ಇಲ್ಲದ ವಿವೇಕ, ಬುದ್ಧಿ, ತಿಳುವಳಿಕೆ ಜ್ಞಾನ, ಅರಿವು, ಅನುಭವ, ವಿವೇಚನೆ, ಎಂಬುವು ಮಾನವನಲ್ಲಿ ಎಲ್ಲಾ ಜೀವಿಗಳಿಗಿಂತ ಹೆಚ್ಚಾಗಿರುತ್ತವೆ. ಇವುಗಳಿಂದ ಹಿತ-ಅಹಿತ, ಸುಖ-ದುಃಖ ಬೇಕು-ಬೇಡ, ಹೇಯ-ಉಪಾಧೇಯ, ಒಳ್ಳೆಯದು-ಕೆಟ್ಟದು, ಸರಿ-ತಪ್ಪು, ಪುಣ್ಯ-ಪಾಪಗಳ ವಿವೇಚನೆ ಇರುತ್ತದೆ. ಇವುಗಳನ್ನು ತನ್ನ ಜ್ಞಾನ ವಿವೇಕಗಳಿಂದ ತಿಳಿದು ಮಾನವನು ವರ್ತಿಸುವುದರಿಂದ ತನ್ನ ಹಿತ-ಅಹಿತವನ್ನು ತಿಳಿಯಬಹುದು. ಇದೇ ಇತರ ಪ್ರಾಣಿಗಳಿಗಿಂತ ಮಿಗಿಲಾಗಿ ಇರುವ ಹೆಚ್ಚುಗಾರಿಕೆ. ಇದರಿಂದಲೇ ಮಾನವನು ಶ್ರೇಷ್ಠ ಜೀವಿ ಎನಿಸಿದ್ದಾನೆ.

ಹೀಗಾಗಿ ತನಗಿರುವ ಜ್ಞಾನದ ಉಪಯೋಗ, ಪ್ರಯೋಗ, ಬಳಕೆಯಿಂದ ಸುಖಿಯಾಗಿರಬಹುದು, ನಿಜವಾಗಿ ಜ್ಞಾನವೇ ಸುಖ, ಅಜ್ಞಾನವೇ ದುಃಖ. ಜ್ಞಾನವೇ ಬೆಳಕು-ಪ್ರಕಾಶ. ಅಜ್ಞಾನವೇ ಕತ್ತಲು-ಅಂಧಕಾರ. ಆದ್ದರಿಂದ ಮಾನವನು ತನಗೆ ಆವರಿಸಿರುವ ಅಜ್ಞಾನವನ್ನು ಓಡಿಸಿ ಸುಜ್ಞಾನದ ಬೆಳಕಿನಲ್ಲಿ ಜೀವಿಸಬೇಕು. ಜ್ಞಾನವೆಂಬುದು ಎಲ್ಲಿಂದಲೋ ಪಡೆದುಕೊಳ್ಳುವ ವಸ್ತುವಲ್ಲ. ಅದು ತನ್ನಲ್ಲಿಯೇ

ಇದೆ. ಅದೇ ಆತ್ಮಚೈತನ್ಯ ಶಕ್ತಿ. ಈ ಶಕ್ತಿಯನ್ನು ಅದುಮಿ ಹಿಡಿದುಕೊಂಡಿರುವ ಕರ್ಮದ ಆವರಣವನ್ನನುಸರಿಸಿ ಅಂತರಂಗದ ಜ್ಞಾನಪ್ರಕಾಶದಲ್ಲಿ ಸುಖಶಾಂತಿಯನ್ನು ಅನುಭವಿಸಬೇಕು. ಈ ಆವರಣವು ಆವರಿಸಲು ಕಾರಣವೆಂದರೆ ರಾಗ ದ್ವೇಷ ಮೋಹ ಕಷಾಯಗಳೇ ಕಾರಣ. ಕ್ರೋಧ, ಮಾನ, ಮಾಯಾ, ಮೋಹ, ಮದ, ಮತ್ಸರ, ಕಾಮ, ರಾಗ, ದ್ವೇಷ ಗಳೆಂಬ ಅಂತರಂಗದ ಕೊಳೆಯನ್ನು ತನ್ನ ವಿವೇಕದ ಪ್ರಯೋಗದಿಂದ ದಯೆ, ಕರುಣೆ, ಮೃದುತ್ವ, ಸರಳತೆ, ಸಾತ್ವೀಕತೆ, ಸಜ್ಜನತೆ, ಸತ್ಯಪಾಲನೆ, ಶಾಂತಸ್ವಭಾವ, ದಯಾಭಾವನೆ ಕ್ಷಮಾಗುಣ, ಸಾತ್ವೀಕತೆಗಳೆಂಬ ಅಮೃತಕಣಗಳಿಂದ ತೊಳೆದು ಸ್ವಚ್ಛಗೊಳಿಸಿ 'ನೀನೂ ಬಾಳು, ಇತರರೂ ಬಾಳಲು ಬಿಡು' ಎಂಬ ಭಗವಾನ್ ಮಹಾವೀರರ ವಾಣಿಯಂತೆ ಪರಸ್ಪರ ಸಹಕಾರೀ ಮನೋಭಾವನೆಯಿಂದ ಬಾಳಿದರೆ ಇಹಪರಗಳಲ್ಲಿ ಸುಖ ಶಾಂತಿ ನೆಮ್ಮದಿಯಿಂದ ಬಾಳಬಹುದು. ಅದಕ್ಕಾಗಿ ಸಾತ್ವೀಕ ಆಹಾರಪಾನ-ಸಜ್ಜನರ ಸದ್ಗುಣಗಳ ಸಹವಾಸ ಜಿನೇಂದ್ರ ಭಗವಂತನಲ್ಲಿ ಭಕ್ತಿ, ನಂಬಿಕೆ-ಜಿನವಾಣಿಯ ಸ್ವಾಧ್ಯಾಯ ಜಿನಗುರುಗಳ ಸೇವೆ, ಅಹಿಂಸೆ, ಸತ್ಯ, ಅಚೌರ್ಯ, ಶೀಲಪಾಲನೆ, ಪರಿಮಿತ ಪರಿಗ್ರಹ ಮುಂತಾದ ವ್ರತಗಳ ಪಾಲನೆ ಮಾಡಬೇಕಾದುದು ಅಗತ್ಯವಾಗಿದೆ. ಜೊತೆಗೆ ಮಾನವನ ಜೀವನ ಹಸನಾಗಲು ದೇವಪೂಜೆ-ಗುರುಸೇವೆ, ಸ್ವಾಧ್ಯಾಯ, ಸಂಯಮ, ತಪ- ದಾನಗಳೆಂಬ ಆರು ಆವಶ್ಯಕ ಕ್ರಿಯೆಗಳನ್ನು ಮಾಡಬೇಕು. ಮಿಗಿಲಾಗಿ ನೈತಿಕ ಪ್ರಾಮಾಣಿಕವಾದ ಜೀವನ ಪಾಲನೆಯಿಂದ ಅಜ್ಞಾನವೆಂಬ ಅಂಧಕಾರದಿಂದ ಸುಜ್ಞಾನವೆಂಬ ಬೆಳಕಿನ ಕಡೆಗೆ ಸಾಬಹುದು, ದುಃಖದಿಂದ ಸುಖದ ಕಡೆಗೆ ಹೋಗಬಹುದು. ಅದರಿಂದ ನೀತಿಯೇ ಜ್ಯೋತಿಯಾಗಿದೆ. ಮಾನವನ ಪರಿಶುದ್ಧತೆಯು ಈ ನೀತಿ ನಿಯಮ ಪಾಲನೆಯಿಂದಾಗುತ್ತದೆ.

ಮಾನವನ ಜೀವನದ ತರಬೇತಿಯು ಈ ನೀತಿಯಿಂದಲೇ ಸಾಧ್ಯ. ಜಿನೇಂದ್ರರು ಬೋಧಿಸಿರುವುದೇ ಇಂತಹ ನೀತಿಗಳು. ನಿಜವಾದ ದೇವಗುರುಗಳನ್ನು ನಂಬು. ನಿನ್ನ ನಿಜವನ್ನು, ಆತ್ಮಚೇತನವನ್ನು ನಂಬು. ನಿಜವಾದ ಜ್ಞಾನವನ್ನು ಹೊಂದು. ಉತ್ತಮವಾದ ಚಾರಿತ್ರ್ಯವನ್ನು ಪಾಲಿಸು ಎಂದು ಬೋಧಿಸಿದ್ದಾರೆ. ಇವೇ ದುಃಖದಿಂದ ಬಿಡುಗಡೆಗೆ ಉತ್ತಮ ಮಾರ್ಗವಾಗಿವೆ. ಇವೇ ಸಮ್ಯಗ್ದರ್ಶನ, ಸಮ್ಯಜ್ಞಾನ, ಸಮ್ಯಕ್ಚಾರಿತ್ರವೆಂಬ ರತ್ನತ್ರಯಗಳಾಗಿವೆ. ಹೀಗಾಗಿ ಇಂತಹ ನೀತಿಯಿಂದಲೇ ತನು-ಮನ-ಆತ್ಮಗಳು ಪರಿಶುದ್ಧತೆ ಸಾಧ್ಯ. ಮನದ ಪರಿಶುದ್ಧತೆಯ ಸಾಧನವೇ ನೀತಿ. ಇದನ್ನರಿತೇ ಹಿಂದೆ ನಮ್ಮ ಶಿಕ್ಷಣದಲ್ಲಿ ನೈತಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದರು. ಇಂದು ನೈತಿಕ ಶಿಕ್ಷಣದ ಅಭಾವದಿಂದಲೇ ಹಲವು



ಸಮಸ್ಯೆಗಳು ಸಮಾಜವನ್ನು ಕಾಡುತ್ತಿವೆ. ಈಗಲೂ ಕಾಲ ಮಿಂಚಿಲ್ಲ. ಸಮಾಜ ಸುಧಾರಕರೂ, ಶಿಕ್ಷಣವೇತ್ತರೂ, ಮಕ್ಕಳಿಗೆ ನೈತಿಕ ಶಿಕ್ಷಣವನ್ನೂ ಇತರ ಪಾಠಗಳಂತೆಯೇ ಕೊಡುವ ವ್ಯವಸ್ಥೆ ಮಾಡುವುದು ಉತ್ತಮ.

ಸಣ್ಣ ಸಣ್ಣ ಕಥೆಗಳ ಮೂಲಕ ನೀತಿಯನ್ನು ಸುಲಭವಾಗಿ ಮಕ್ಕಳಿಗೆ ತಿಳಿಸಿ ಕಲಿಸಬಹುದು. ಮಗುವಿನ ಮನಸ್ಸು ಹಸಿಯಾದ ಮಣ್ಣಿನಂತೆ, ಅಥವಾ ಮೇಣದಂತೆ. ಇವುಗಳಿಂದ ಬೇಕಾದ ಆಕಾರವನ್ನು ರೂಪಿಸಬಹುದು. ಮಗುವಿನ ಭಾವನೆಗಳನ್ನು ಗುಣಗಳನ್ನು ಉತ್ತಮರೀತಿಯಲ್ಲಿ ಬೆಳೆಯುವಂತೆ ಮಾಡಬಹುದು. ಮಕ್ಕಳಲ್ಲಿ ಅಪೂರ್ವವಾದ ಸ್ಮರಣಶಕ್ತಿ ಇರುತ್ತದೆ. ಕುತೂಹಲ, ಆಸಕ್ತಿಗಳನ್ನು ಕೆರಳಿಸಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ತರಬೇತುಗೊಳಿಸಬಹುದು. ಇಂದಿನ ಸಮಾಜದಲ್ಲಿ ಬಾಳುವುದಕ್ಕೆ ಕಲೆ-ಸಾಹಿತ್ಯ-ಭಾಷೆ-ಇತಿಹಾಸ-ವಿಜ್ಞಾನ ತಾಂತ್ರಿಕ ಜ್ಞಾನಗಳೂ ಬೇಕು ಅದರೊಂದಿಗೆ ನೈತಿಕ, ಧಾರ್ಮಿಕ, ತಾತ್ವೀಕ ಶಿಕ್ಷಣಗಳೂ ಅವಶ್ಯವಾಗಿ ಬೇಕು. ಎಷ್ಟೇ ಲೌಕೀಕ-ಭೌತೀಕ-ವಿಜ್ಞಾನ ಶಿಕ್ಷಣ ಪಡೆದರೂ ಶಾಂತಿ-ಸುಖವಿಲ್ಲದೆ ಹಲವು ಅನಾಹುತಗಳಿಗೆ ಕಾರಣವೆಂದರೆ ನೈತಿಕ ಶಿಕ್ಷಣ ಹೊಂದದೇ ಇರುವುದು. ಕುಟುಂಬದಲ್ಲಿ ತಂದೆ-ತಾಯಿ, ಪೋಷಕರು ನೀತಿವಂತರಾದರೆ, ಸುಶಿಕ್ಷಿತರಾದರೆ ತಮ್ಮ ಸಂತಾನವನ್ನು ತಿದ್ದಿ ನಡೆಸಬಹುದು.

ಸಣ್ಣ ಸಸಿಯನ್ನು ನಮಗೆ ಬೇಕಾದ ರೀತಿಯಲ್ಲಿ ಬೆಳೆಸಬಹುದು. ಒರಟಾದ ಬಿದಿರನ್ನು ಬೇಕಾದ ಹಾಗೆ ಬಗ್ಗಿಸಿ ಬೆಳೆಸಬಹುದು. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ಎನ್ನುತ್ತಾರೆ.

ಒಂದು ಅಜ್ಜಿ ತನ್ನ ಮೊಮ್ಮಗನನ್ನು ಸಾಕಿಕೊಂಡಿದ್ದಳು. ಆ ಹುಡುಗ ಇನ್ನೂ ಮೂರು ವರ್ಷ ವಯಸ್ಸಿನಲ್ಲೇ ಓರ್ವ ಬಾಳೆಹಣ್ಣು ಮಾರುವವಳ ಬುಟ್ಟಿಯಿಂದ ಒಂದು ಹಣ್ಣನ್ನು ಎಗರಿಸಿಕೊಂಡು ತನ್ನ ಅಜ್ಜಿಗೆ ತೋರಿಸಿದನು. ಅದನ್ನು ಕಂಡು ಅಜ್ಜಿ ಅವನನ್ನು ಮೆಚ್ಚಿ, ಒಳ್ಳೆಯ ಕೆಲಸ ಮಾಡಿದೆ ನೀನು ಬಲು ಚೂಟಿ ಇದ್ದೀಯೆ ಎಂದು ಬೆನ್ನು ತಟ್ಟಿ ಮುದ್ದಿಸಿದಳು. ಅವನು ಇನ್ನೊಂದು ದಿನ ಅಂಗಡಿಯಿಂದ ಸಾಮಾನು ಕದ್ದು ತಂದು ಅಜ್ಜಿಗೆ ಕೊಟ್ಟನು. ಅದನ್ನು ಇನ್ನೂ ಆಕೆ ಪ್ರಶಂಸಿದಳು. ಆ ಹುಡುಗ ಬೆಳೆಯುತ್ತಾ ಬೆಳೆಯುತ್ತಾ ದೊಡ್ಡ ಕಳ್ಳನೇ ಆದ. ಅವನು ಸಿಕ್ಕಿಬಿದ್ದು ಜೈಲಿಗೆ ಹೋದ. ಅಜ್ಜಿ ದುಃಖಿಸಿದಳು. ಪಶ್ಚಾತ್ತಾಪ ಪಟ್ಟು ನಾನು ಅವನನ್ನು ಚಿಕ್ಕಂದಿನಲ್ಲೇ ಬುದ್ಧಿ ಹೇಳಿ ಕದಿಯುವುದು ಕೆಟ್ಟದ್ದು ಎಂದು ಹೇಳಬೇಕಾಗಿತ್ತು ಅಂದುಕೊಂಡಳು. ಕಾಲ ಮಿಂಚಿತ್ತು. ಹೀಗೆ ಯಾವುದನ್ನೇ ಆಗಲೀ, ಒಳ್ಳೆಯದಾಗಲೀ, ಕೆಟ್ಟದ್ದೇ ಆಗಲೀ, ಚಿಕ್ಕಂದಿನಲ್ಲೇ ಪ್ರೋತ್ಸಾಹ ಕೊಟ್ಟರೆ,

ಅದರಂತೆಯೇ ರೂಪಿತರಾಗುತ್ತಾರೆ. ಅದಕ್ಕೇ ಹೇಳುತ್ತಾರೆ "ಮೂರರಲ್ಲಿ ಕಲಿತದ್ದು ನೂರರತನಕ" ಎಂದು. ಬಾಲ್ಯದಲ್ಲಿ ಕಲಿತುದು ಬಾಳಿನುದ್ದಕ್ಕೂ ಇರುತ್ತದೆ.

ಮಕ್ಕಳ ಶೈಶವಾ, ಬಾಲ್ಯಾವಸ್ಥೆಯಲ್ಲಿರುವಾಗಲೇ, ಹಲವು ಉತ್ತಮ ಪ್ರವೃತ್ತಿಗಳಿಗೆ ನೀತಿ ಎಂಬ ನೀರೆರೆದು ನಿಯಮವೆಂಬ ಗೊಬ್ಬರ ನೀತಿ ದಯೆ-ಧರ್ಮಗಳೆಂಬ ಹಾರೈಕೆ ಮಾಡಿದರೆ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ನಡೆಸಬಹುದು. ಅವರು ಸತ್ಪ್ರಜೆಗಳಾಗುವಂತೆ ಮಾಡಬಹುದು. ಇಂದಿನ ಮಗು ನಾಳಿನ ನಾಗರೀಕ. ದೇಶದ ನಾಯಕ, ಧರ್ಮದ ಮುಂದಾಳು, ಉತ್ತಮ ಗೃಹಸ್ಥ, ಪ್ರಸಿದ್ಧ ಯೋಗಿ, ಆಧ್ಯಾತ್ಮ ಸಂತ, ಒಳ್ಳೆಯ ಮಾರ್ಗದರ್ಶಿ, ಆದರ್ಶ ವ್ಯಕ್ತಿಯನ್ನಾಗಿ ರೂಪಿಸಬಹುದು. ಆದ್ದರಿಂದ ಮಕ್ಕಳು ತಮ್ಮ ಬೆಳವಣಿಗೆಯೊಂದಿಗೆ ಕಲಿಕೆಯೊಂದಿಗೇ ನೀತಿವಂತರಾಗಬೇಕು. ಬರುಬರುತ್ತಾ ಆ ಮಗು ವ್ಯವಹಾರದೊಂದಿಗೆ, ಆಧ್ಯಾತ್ಮಸಾಧನೆಯನ್ನೂ ಮಾಡಿಕೊಂಡು ಉತ್ತಮ ಬಾಳುವೆ ಮಾಡುತ್ತದೆ.

ಹೀಗಾಗಿ ಜ್ಞಾನ ಬೇರೆಯಲ್ಲ, ಶೀಲ ಬೇರೆಯಲ್ಲ. ಎರಡೂ ಸರಿಯಾಗಿಸಿಕೊಂಡು ಹೋದರೆ ಒಳ್ಳೆಯ ನಡತೆ ಬರುತ್ತದೆ. ಆದ್ದರಿಂದ ಮೊದಲು ಒಳ್ಳೆಯದು ಮತ್ತು ಕೆಟ್ಟದ್ದು ಯಾವುದೆಂಬುದನ್ನು ಅರಿಯುವುದೇ ವಿವೇಕ. ಇದರ ಅರಿವನ್ನು ಶಾಲೆಯಲ್ಲಿ ಶಿಕ್ಷಕರು, ಮನೆಯಲ್ಲಿ ಪಾಲಕರು ತಿಳಿಸಬೇಕು.

ಆಚಾರ, ವಿಚಾರ, ನೀತಿ, ನ್ಯಾಯ, ಧರ್ಮವಿಲ್ಲದ ಬಾಳುಬಾಳಲ್ಲ - ಅದು ಹಾಳು. ತಿಳಿವಳಿಕೆ ಇಲ್ಲದ ನಡತೆ, ದುರ್ನಡತೆ, ದುರಾಚಾರವಾಗುತ್ತದೆ. ಆದ್ದರಿಂದ ಜ್ಞಾನವು ಶೀಲಸಂಪನ್ನವಾಗಿರಬೇಕು. ನೈತಿಕತೆಯಿಂದ ಕೂಡಿರಬೇಕು.

ನೈತಿಕ ಶಿಕ್ಷಣವು ಕೇವಲ ಒಂದು ಜಾತಿಗೆ, ಪಂಥಕ್ಕೆ ಮಾತ್ರ ಮೀಸಲಲ್ಲ. ನೀತಿ ಜಾತಿ ಬೋಧನೆಯಲ್ಲ. ಜಾತಿಯೇ ಬೇರೆ ನೀತಿಯೇ ಬೇರೆ. ಜಾತಿ ಸಂಕುಚಿತವಾದದ್ದು, ನೀತಿ ವೈಶಾಲ್ಯತೆಯಿಂದ ಕೂಡಿದುದು. ನೀತಿ ಒಂದು ಪಂಗಡದ ಪ್ರತಿಭೆಯ ಪ್ರಕಟಣೆಯಲ್ಲ. ಧರ್ಮಮಾರ್ಗದ ಅನುಸರಣೆ, ಸತ್ಯದ ಸಾಕ್ಷಾತ್ಕಾರಗಳು, ಸನ್ಮಾರ್ಗದಲ್ಲಿ ಸಾಗುವುದು. ಗುರುಹಿರಿಯರಲ್ಲಿ ಭಕ್ತಿ - ಗೌರವ, ಗುಣವಂತರ ಸತ್ಕಾರ, ಬಡವರ, ದಲಿತರ, ಅಸಮರ್ಥರಲ್ಲಿ ಅನುಕಂಪ, ಪ್ರಾಣಿಮಾತ್ರದವರಲ್ಲಿ ದಯೆ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಭಾವನೆ. ಮುಂತಾದವು ಮಗುವಿನಲ್ಲಿ ಚಿಕ್ಕಂದಿನಲ್ಲೇ ಮೈಗೂಡುವಂತೆ ಮಾಡಬೇಕು. ಅಸತ್ಯದಿಂದ ಸತ್ಯದಕಡೆಗೆ, ಹಿಂಸೆಯಿಂದ-ಅಹಿಂಸೆಯ ಕಡೆಗೆ, ಅನ್ಯಾಯದಿಂದ-ನ್ಯಾಯದ ಕಡೆಗೆ,



ಅಧರ್ಮದಿಂದ ಧರ್ಮದ ಕಡೆಗೆ ಕೊಂಡೊಯ್ಯುವುದೇ ನೀತಿ ಶಿಕ್ಷಣ.

ಇಂದಿನ ವಿಜ್ಞಾನಯುಗದಲ್ಲಿ ಜನತೆಯು ನೀತಿ, ಧರ್ಮಗಳಿಂದ ದೂರಾಗುತ್ತಿರುವುದು ಅನೇಕ ದಾರ್ಶನಿಕರನ್ನು ತಲ್ಲಣಗೊಳಿಸುತ್ತಿವೆ. ಇದರಿಂದ ಶಿಕ್ಷಣತಜ್ಞರೂ ಗಾಬರಿಯಾಗಿದ್ದಾರೆ. ವಿಜ್ಞಾನ ಮೇಲೇರಿದಂತೆ ನೈತಿಕ ಶಿಕ್ಷಣ, ಆತ್ಮಜ್ಞಾನ, ಸ್ವಾವಲಂಬನೆ, ಶ್ರಮಜೀವನಗಳು ಕೆಳಗಿಳಿಯುತ್ತವೆ. ಇದರಿಂದಾಗಿ ಜೀವನದಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ಗುರಿ ಇಲ್ಲವಾಗಿದೆ. ಹೇಗೋ ಜೀವನ ಮಾಡಿದರಾಯಿತು. ನಾವು ಸುಖವಾಗಿದ್ದರಾಯಿತು, ಪರರ ಬಗ್ಗೆ ನಮಗೇನು ಎಂಬ ಸ್ವಾರ್ಥ ಸಂಕುಚಿತ ಮನೋಭಾವ ಬೆಳೆಯುತ್ತಿದೆ. ಅದರಿಂದಲೇ ಕೊಲೆ, ಸುಲಿಗೆ, ಕಳ್ಳತನ, ಮೋಸ ಜಗಳಗಳಾಗುತ್ತಿವೆ. ಇದರಿಂದಲೇ ಜಾತಿ ವೈಷಮ್ಯ, ಭಾಷಾಗೊಂದಲ, ಪ್ರಾಂತಭಿನ್ನತೆಗಳಾಗಿ ಕ್ರಮೇಣ ಜಗತ್ತಿನಲ್ಲಿ ಯುದ್ಧ ಆಕ್ರಮಣದ ಭೀತಿ ಹೆಚ್ಚಾಗುತ್ತಿದೆ. ಇದಕ್ಕೆಲ್ಲಾ ನೀತಿ ಬೋಧನೆಯ ಅಭಾವವೇ ಕಾರಣ. ಶಿಕ್ಷಣದಲ್ಲಿ ನೀತಿ ಬೋಧನೆಗೆ ಸೂಕ್ತ ಸಮಯವಿಲ್ಲದಿರುವುದೇ ಕಾರಣ. ವಿಜ್ಞಾನವನ್ನೇ, ಹೊಟ್ಟೆಪಾಡಿನ ಜ್ಞಾನವೇ, ಅಕ್ಷರಜ್ಞಾನವನ್ನೇ, ಪೂರ್ಣಜ್ಞಾನವೆಂದು ಎಣಿಸಿರುವುದೇ ಜಗತ್ತಿನ ಜನರ ದೊಡ್ಡ ಅಪರಾಧವಾಗಿದೆ. ಇತಿಹಾಸವನ್ನು ತಿರುವಿಹಾಕಿದಾಗ ದೊಡ್ಡ ದೊಡ್ಡ ದಾರ್ಶನಿಕರ, ನೇತಾರರ, ಮುಖಂಡರ, ವಿದ್ವಾಂಸರ, ಸತ್ಪುರುಷರುಗಳ ಮೇಲೆ ಹಲ್ಲೆ, ಹತ್ಯಾಕಾಂಡಗಳು ಆಗುತ್ತಿರುವುದಕ್ಕೆ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿ ಜಖಂ ಮಾಡುತ್ತಿರುವುದಕ್ಕೆ ಮೂಲಕಾರಣವೆಂದರೆ ಜನರಲ್ಲಿ ನೈತಿಕ ಮಟ್ಟ ತೀರ ಇಲ್ಲದಿರುವುದೂ, ನಿರುದ್ಯೋಗ, ಸೋಮಾರಿತನ ಕಾರಣವಾಗಿದೆ.

ಹಿಂದಿನ ಗುರುಕುಲಗಳ ಬದಲು ಕಾಲ ಬೆಳೆದಂತೆ ಇಂದು ಶಿಕ್ಷಣವು ಒಂದು ಮಾರುಕಟ್ಟೆಯಾಗಿ ಧನಾರ್ಜನೆಗಾಗಿ ತಲೆ ಎತ್ತುತ್ತಿರುವುದು ದುರಾದೃಷ್ಟಕರ. ಪಾಶ್ಚಾತ್ಯರ ಅಂಧಾನುಕರಣೆ, ರೀತಿನೀತಿಗಳ ಅನುಸರಣೆಯಿಂದ ನಮ್ಮ ಧರ್ಮ, ಸಂಪ್ರದಾಯ, ಸಂಸ್ಕೃತಿಗಳು ನೈತಿಕಮಟ್ಟ ಅಧಃಪಾತಾಳಕ್ಕೆ ಇಳಿದಿದೆ. ಶಿಕ್ಷಣದ ಪ್ರಗತಿಯಾಗಿದ್ದರೂ ಅದರ ಫಲ ಉತ್ತಮ ಮಟ್ಟದ್ದಾಗಿಲ್ಲ. ಕೇವಲ ಸರ್ಕಾರಿ ನೌಕರಿಗಾಗಿಯೇ ಶಿಕ್ಷಣ ಪಡೆಯುವುದಾಗಿ ಸಮಾಜ ಭಾವಿಸಿದೆ. ಅದಕ್ಕಾಗಿ ಪೈಪೋಟಿ ಹೆಚ್ಚಾಗಿದೆ. ಇದರಿಂದ ಸ್ವಯಂ ಉದ್ಯೋಗ, ಸ್ವಾವಲಂಬನೆ ಇಲ್ಲವಾಗಿದೆ. ನಿರುದ್ಯೋಗ ಹೆಚ್ಚಾಗಿದೆ. ವೈಜ್ಞಾನಿಕ ಬೋಧನೆಯಿಂದ ಪುಲಕಿತರಾದ ವಿದ್ವಾಂಸರು ಚಂದ್ರ, ಮಂಗಳ ಗ್ರಹಗಳತ್ತ ಪ್ರಯಾಣ ಮಾಡಿಬರಬಹುದು. ಆದರೆ ಅದರಿಂದ ದೇಶಕ್ಕೆ, ಜನಕ್ಕೆ, ತೃಪ್ತಿ, ಶಾಂತಿ, ಸುಖ ನೆಮ್ಮದಿ ದೊರೆಯುವುದೇ!?

ಇವೆಲ್ಲಾ ವ್ಯಕ್ತಿಗೆ ಸಿಗದಿದ್ದರೆ ಆ ಶಿಕ್ಷಣದಿಂದ ಫಲವೇನು. ತನ್ನ ಜೀವನವನ್ನು ತಾನು ದುಡಿದು ನಿರಾತಂಕವಾಗಿ ಸಾಗಲು ಆಗದಿದ್ದರೆ ಶಿಕ್ಷಣದಿಂದ ಏನು ಫಲ? ಸಂತೃಪ್ತಿ ಜೀವನ ಶಿಕ್ಷಣದ ಗುರಿಯಾಗಬೇಕು. ಮಗುವಿಗೆ ಸಮಾಜದಲ್ಲಿ ಇತರರಿಗೆ ಹೊರೆಯಾಗದಂತೆ ಇತರರ ಬಾಳಿಗೆ ಮುಳ್ಳಾಗದಂತೆ ತನ್ನ ಜೀವನವನ್ನು ಸಾಗಿಸುವಂತಹ ಶಿಕ್ಷಣವನ್ನು ನೀಡಬೇಕು.

ಇವಕ್ಕೆಲ್ಲಾ ಭಗವಾನ್ ಮಹಾವೀರರು ಬೋಧಿಸಿರುವ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಪಂಚಶೀಲಗಳ ಪಾಲನೆಯ ಕ್ರಮವನ್ನು ಚಿಕ್ಕಮಕ್ಕಳಿಗೆ ತಿಳಿಸಬೇಕು. ಇಂದಿನ ಶಿಕ್ಷಣದ ಜೊತೆಗೇ ವಿವೇಕ-ನೀತಿಗಳೆಂಬ ಚಕ್ರವನ್ನು ಜೋಡಿಸಿ ಜೀವನರಥವನ್ನು ಸಾಗಿಸಬೇಕು. ನೀತಿಯುತ ಜ್ಞಾನ, ಜ್ಞಾನಸಹಿತ ನಡೆಯಂತೆ ನುಡಿ ಎಂಬುದನ್ನು ಮಕ್ಕಳಲ್ಲಿ ಕಲಿಸಬೇಕು.

ನೀತಿಯುತ ಶಿಕ್ಷಣದಿಂದ ಸಂತೃಪ್ತ ಜನಾಂಗದ ನಿರ್ಮಾಣವಾದರೆ ಕೇವಲ ಒಂದು ದೇಶವಲ್ಲ, ಅದರಿಂದ ಪ್ರಪಂಚಕ್ಕೆ ಶಾಂತಿ ದೊರೆಯುವುದು. ಶಿಕ್ಷಣದಲ್ಲಿ ನೀತಿಯನ್ನು ಸೇರಿಸಿ ಕಲಿಕೆ ಸಾಗಿದರೆ, ಮಗು ತಾನೇ ತಾನಾಗಿ ಸನ್ಮಾರ್ಗದಲ್ಲಿ ನಡೆಯುತ್ತದೆ.

ನೀತಿವಂತ, ವಿದ್ಯಾವಂತನಿಂದ ಸಮಾಜಕ್ಕೆ ಸಮಸ್ಯೆಯಾಗುವುದಿಲ್ಲ. ಅವನಿಂದ ಸಮಾಜಕ್ಕೆ ಒಳ್ಳೆಯದೇ ಆಗುತ್ತದೆ. ಆತ ತಾನು ಮಾಡುತ್ತಿರುವ ವೃತ್ತಿ ಯಾವುದೇ ಆಗಲಿ ಅವನಿಂದ ಯಾವ ಲೋಪದೋಷವೂ ಆಗದೆ ಸಮಾಜ ಸುಖ ಶಾಂತಿಯಿಂದ ಬಾಳುವುದು. ನೀತಿವಂತನು ಉತ್ತಮ ಪ್ರಜೆಯಾಗಿ ನಾಗರೀಕನಾಗಿರುತ್ತಾನೆ.

## 80. ಭವಾವಳೀ ತತ್ತ್ವ

ಭವಾವಳೀ ಎಂದರೆ ಜನ್ಮಗಳ ಸಾಲು. ಅದು ಪೂರ್ವಭವ ಮತ್ತು ಉತ್ತರಭವ ಎಂದು ಎರಡು ವಿಧ. ಪೂರ್ವಭವವೆಂದರೆ ಹಿಂದಿನ ಜನ್ಮ. ಉತ್ತರ ಭವವೆಂದರೆ ಮುಂದಿನ ಜನ್ಮ. ಆತ್ಮನು ತಾನು ಬಂಧಿಸಿಕೊಂಡ ಕರ್ಮಕ್ಕೆ ಅನುಸಾರವಾಗಿ ದೇವಗತಿಯೋ, ಮನುಷ್ಯಗತಿಯೋ, ತಿರ್ಯಂಚಗತಿಯೋ,



ನರಕಗತಿಯೋ, ಈ ನಾಲ್ಕರಲ್ಲಿ ಒಂದಲ್ಲೊಂದು ಗತಿಯಲ್ಲಿ ಜನ್ಮ ತಾಳುತ್ತಲೇ ಬಂದಿದೆ. ಅನಾದಿಕಾಲದಿಂದಲೂ ಜೀವನಿಗೆ ಕರ್ಮದ ಬಂಧವಿದೆ, ಆದರಿಂದಾಗಿ ಜನ್ಮ ಜನ್ಮಗಳಲ್ಲಿ ಹುಟ್ಟು ಸಾವುಗಳ ಪರಂಪರೆ ಸಾಗಿ ಬಂದಿದೆ. ಈ ಕರ್ಮದ ಪೂರ್ಣ ನಿಶ್ಶೇಷವಾಗುವತನಕ ಈ ಭವಾವಳಿ ನಿಲ್ಲುವುದಿಲ್ಲ. ಆಯಾ ಭವಗಳಲ್ಲಿ ಜೀವನು ಅನುಭವಿಸುವ ಸುಖ ದುಃಖಗಳಿಗೆ ಕಾರಣವಾದ ಪಾಪ ಪುಣ್ಯಗಳ ಬಂಧನವು ತನ್ನ ಹಿಂದಿನ ಜನ್ಮಗಳಲ್ಲಿ ಆದದ್ದು, ಈ ಜನ್ಮದಲ್ಲಿ ಬಂಧಿಸಿಕೊಂಡ ಪಾಪ ಪುಣ್ಯಗಳ ಕರ್ಮದ ಫಲವನ್ನು ಮುಂದಿನ ಜನ್ಮದಲ್ಲಿ ಅನುಭವಿಸ ಬೇಕಾಗುವುದು. ಈ ಕರ್ಮಬಂಧನವು ಒಂದು ನಿಮಿತ್ತ ಕಾರಣವನ್ನು ಅನುಸರಿಸಿ ಉದಯಕ್ಕೆ ಬಂದು ತತ್ಸಂಬಂಧವಾದ ಸುಖವನ್ನೋ, ದುಃಖವನ್ನೋ ನೀಡುತ್ತದೆ. ಹೀಗೇ ಈ ಪರಿಪಾಟಿಯು ಈ ಜೀವನಿಗೆ ಅನಾದಿಯಿಂದಲೂ ಸಾಗಿ ಬಂದಿದೆ. ಹೀಗಾಗಿ ಈ ಜೀವನು ಈ ಚತುರ್ಗತಿ ಚಕ್ರದಲ್ಲಿ ಸುತ್ತುತ್ತಲೇ ಇದ್ದಾನೆ. ಈ ಸುತ್ತಾಟಕ್ಕೆ, ಅಲೆದಾಟಕ್ಕೆ, ಈ ಚಕ್ರಕ್ಕೆ ಭವಮಾಲೆ ಎನ್ನುತ್ತಾರೆ. ಜೀವಿಗಳ ಭೂತ, ಭವಿಷ್ಯತ್, ವರ್ತಮಾನ ಕಾಲಗಳ ಸ್ಥಿತಿಗತಿಗಳನ್ನು ತಿಳಿಸುವ ಸರಮಾಲೆಯೇ ಭವಾವಳಿ ತತ್ತ್ವ. ಈ ಗತಿ ಚಕ್ರದಲ್ಲಿ ಸಿಕ್ಕಿಸಿ ತಿರುಗಿಸುವ ಶಕ್ತಿಯೇ ಕರ್ಮಬಂಧ.

ಸೂಕ್ಷ್ಮಾತಿಸೂಕ್ಷ್ಮವಾದ ಜಡಾಣುಗಳು, ಈ ಜಗತ್ತಿನ ತುಂಬಾ ತುಂಬಿರುತ್ತವೆ. ಇವು ಜೀವನೊಂದಿಗೆ ಸೇರುವ ಜೀವಿಯ ಸ್ವರೂಪವನ್ನು ವಿಕಾರಗೊಳಿಸುವ, ಶುಭಾಶುಭ ಫಲವನ್ನು ನೀಡಿ ಬಿಟ್ಟು ಹೋಗುವ ಗುಣವನ್ನು ಹೊಂದಿರುತ್ತವೆ. ಇವೇ ಕಾರ್ಮಣ, ವರ್ಗಣ ಪುದ್ಗಲಾಣುಗಳು.

ಜೀವಿಗಳ ಮನ ವಚನ ಕಾಯದ ಕ್ರಿಯೆಗಳು ಸದಾ ನಡೆಯುತ್ತಿರುತ್ತದೆ. ಇದಕ್ಕೆ ಯೋಗ ಎನ್ನುತ್ತಾರೆ. ಈ ಸಮಯದಲ್ಲಿ ಆತ್ಮ ಪ್ರದೇಶವು ಪರಿಸ್ಪಂದನವಾಗುತ್ತದೆ, ಕಂಪನವಾಗುತ್ತದೆ. ಆಗ ಕರ್ಮಾಣುಗಳು ತನ್ನತ್ತ ಆಕರ್ಷಿತವಾಗಿ ಆತ್ಮನೊಂದಿಗೆ ಬಂದು ಆವೃತ್ತವಾಗುತ್ತವೆ. ಯಾರ ಮನ, ವಚನ, ಕಾಯದ ಕ್ರಿಯೆಯು ಅಶುಭವಾಗಿರುತ್ತದೋ ಆಗ ಬಂದಂಟಿದ ಕರ್ಮವು ಪಾಪ ಕರ್ಮವೆಂದೂ, ಶುಭವಾಗಿದ್ದಾಗ ಆ ಬಂದಂಟಿದ ಕರ್ಮವು ಪುಣ್ಯ ಕರ್ಮವೆಂದೂ ಹೆಸರಾಗುತ್ತದೆ. ಈ ಪಾಪಪುಣ್ಯಗಳು ಸಮಯಾನುಸಾರ ಪಕ್ವವಾಗಿ ಉದಯವಾಗುತ್ತವೆ. ಆಗ ಜೀವಿಯು ದುಃಖ, ಸುಖವನ್ನು ಅನು ಭವಿಸುತ್ತದೆ. ಈ ಶುಭಾಶುಭಯೋಗದಿಂದ ಕರ್ಮಾಣುಗಳು ಆಯಸ್ಕಾಂತಕ್ಕೆ ಲೋಹವು ಆಕರ್ಷಿತವಾಗಿ ಬಂದು ಅಂಟುವಂತೆ ಬಂದು ಆತ್ಮನೊಂದಿಗೆ ಬಂಧವಾಗುತ್ತವೆ. ಯಾರ ಮನ ವಚನಕಾಯಗಳ ಕ್ರಿಯೆಗಳು ಶುದ್ಧವೂ, ನಿರ್ಮಲವೂ, ನಿಶ್ಚಲವೂ

ಆಗುವುದೋ ಅದು ಶುದ್ಧ ಯೋಗವೆನಿಸುತ್ತದೆ. ಆಗ ಬಂಧವಾಗಿರುವ ಕರ್ಮವು ಆತ್ಮನನ್ನು ಬಿಟ್ಟು ಹೋಗುತ್ತದೆ. ಆಗ ಆತ್ಮ ಶುದ್ಧವಾಗುತ್ತದೆ. ಇದೇ ಮುಕ್ತಿ. ಹೀಗೆ ಆತ್ಮನು ಕರ್ಮದೊಂದಿಗೆ ಇದ್ದಾಗ ಬಂಧವೆಂದೂ, ಕರ್ಮದಿಂದ ಪೂರ್ಣ ಬಿಡುಗಡೆಯಾದಾಗ ಮುಕ್ತಿ ಎಂದೂ ಹೇಳುವರು. ಈ ಮುಕ್ತಿಯು ಆತ್ಮನಿಗೆ ಲಭ್ಯವಾಗುವವರೆಗೂ ಆತ್ಮನು ಕರ್ಮ ಬಂಧನದಿಂದ ಸುಖ-ದುಃಖವನ್ನು ಅನುಭವಿಸುತ್ತಾ ಈ ನಾಲ್ಕೂ ಗತಿಗಳಲ್ಲಿ ಸುತ್ತಾಡುತ್ತಿರುತ್ತದೆ. ಈ ಸುತ್ತಾಟಕ್ಕೆ ಸಂಸಾರವೆನ್ನುತ್ತಾರೆ.

ಸ್ವಚ್ಛವಾದ ಕನ್ನಡಿಯ ಮೇಲೆ ಎಣ್ಣೆ, ಜಿಡ್ಡು ಇದ್ದಾಗ ಅದರ ಮೇಲೆ ಧೂಳು, ಕೊಳೆ ಕುಳಿತಾಗ ಅದು ಮಂಕಾಗಿ ವಿರೂಪವನ್ನು ಹೊಂದುವಂತೆ ನಿತ್ಯ ನಿರ್ಮಲನಾದ ಆತ್ಮನು ತನ್ನ ಶುಭಾಶುಭ ಯೋಗದಿಂದ ಕರ್ಮವನ್ನು ಬಂಧಿಸಿ ಕೊಂಡು ವಿಕಾರನಾಗುತ್ತಾನೆ. ಅದಕ್ಕೆ ತಕ್ಕ ಫಲವನ್ನನುಭವಿಸುತ್ತಾ ಭವ ಭವಗಳಲ್ಲಿ ಸುತ್ತುತ್ತಿರುತ್ತಾನೆ.

ತಾನು ಬಂಧಿಸಿಕೊಂಡ ಪುಣ್ಯ ಕರ್ಮವು ಹೆಚ್ಚಾಗಿದ್ದರೆ ಅದರ ಫಲವನ್ನು ಅನುಭವಿಸಲು ದೇವಗತಿಯಲ್ಲಿ ಜನ್ಮ ತಾಳುತ್ತದೆ. ಪಾಪಕರ್ಮವು ಹೆಚ್ಚಾಗಿದ್ದರೆ ಅದರ ಫಲವನ್ನು ಅನುಭವಿಸಲು ನರಕಗತಿಯಲ್ಲಿ ಜನ್ಮ ತಾಳುತ್ತದೆ. ಪುಣ್ಯ ಸ್ವಲ್ಪ ಕಮ್ಮಿ, ಪಾಪ ಕರ್ಮ ಜಾಸ್ತಿ ಇದ್ದರೆ ತಿರ್ಯಂಚಗತಿಯಲ್ಲಿ ಜನ್ಮತಾಳುತ್ತದೆ. ಪುಣ್ಯ ಪಾಪಗಳು ಸಮವಾಗಿದ್ದರೆ ಮನುಷ್ಯಗತಿಯಲ್ಲಿಯೂ ಜನ್ಮ ತಾಳುತ್ತದೆ. ಹೀಗೆ ಜೀವನಿಗೆ ಈ ರೀತಿಯಾದ ಫಲವನ್ನು ಅನುಭವಿಸಲು ಬೇಕಾದ ಜಾಗವೇ ಗತಿ ಎಂದೂ ಅಲ್ಲಿ ಪಡೆದ ಬಾಡಿಗೆಯ ಮನೆಯೇ ಶರೀರವೆಂದೂ, ಈ ಶರೀರದ ಮೂಲಕ ಅನುಭವಿಸುವ ಸುಖ ದುಃಖರೂಪವಾದ ಕರ್ಮಶಕ್ತಿಗೆ ಕಾರಣವನ್ನು ಪ್ರತಿಬಿಂಬಿಸುವ ಕನ್ನಡಿಯೇ ಜನ್ಮ ಜನ್ಮಾಂತರಗಳೆಂದೂ, ಇದೇ ಭವಾವಳಿ ಎಂದೂ, ಇದರ ತಥ್ಯ-ಸತ್ಯ ನಿರೂಪಣಾ ತಂತ್ರವೇ ಭವಾವಳೀ ತತ್ತ್ವವೆಂದೂ ತಿಳಿಯಬೇಕು.

ಈ ವರ್ತಮಾನ ಭವದಲ್ಲಿ ಅನುಭವಿಸುವ ನೋವು, ನಲಿವು, ಸಂಕಟ, ಹರ್ಷ, ವಿಷಾದ, ಸುಖ, ಸಂತಸ, ಸಂಪದ, ಆನಂದ, ದಾರಿದ್ರ್ಯಗಳಿಗೆ ಕಾರಣ ವನ್ನು ಹುಡುಕಲು ಅವನ ಪೂರ್ವದ ಬಾಳಿನ ಅಥವಾ ಜನ್ಮದ ಕರ್ಮಗ್ರಂಥದ ಪುಟಗಳನ್ನು ತಿರುವಿ ಹಾಕಬೇಕು. ಅದೇ ಭವಾವಳಿ, ಆಗ ಜೀವಿಯೂ ತಾನು ಬಂಧಿಸಿಕೊಂಡು ಅಥವಾ ಬರೆದುಕೊಂಡು ಹೊತ್ತು ತಂದಿರುವ ತಾನು ಮಾಡಿದ ಹುಳುಕು, ಬೆಳಕು, ಶುಭ, ಅಶುಭಗಳು ಗೊತ್ತಾಗುತ್ತವೆ.



ತನ್ನ ಏಳುಬೀಳುಗಳಿಗೆ, ಸುಖ ದುಃಖಗಳಿಗೆ ಜೀವನಕ್ಕೆ ಬೇಕಾದ ಬಂಡವಾಳವನ್ನು ತಾನೇ ಗಳಿಸಿ ಅದರ ಫಲವನ್ನು ತಾನೇ ಅನುಭವಿಸಿ ಅದರಿಂದ ಬಿಡುಗಡೆಯನ್ನು ತಾನೇ ಅನುಭವಿಸಿ ಅದರಿಂದ ಮೋಕ್ಷವನ್ನು ತಾನೇ ಹೊಂದುವ ಪರಿಪಾಟಿಯೇ ಭವಾವಳೀ ತತ್ತ್ವ. ಇದರ ಹೊಣೆ ತಾನೇ ಆಗಿದೆ. ಈ ಕ್ರಿಯೆಯನ್ನು ನಡೆಸುವ ಯಾವುದೋ ಒಂದು ಚೇತನ ಶಕ್ತಿ ಎಂಬುದೊಂದು ಇಲ್ಲ.

ಇಂತಹ ಭವಾವಳಿಯ ಚಿತ್ರಣವು ಜೈನ ಕಥಾಸಾಹಿತ್ಯದಲ್ಲಿ, ಪುರಾಣ ಪುಣ್ಯಕಥೆಗಳಲ್ಲಿ ವಿಪುಲವಾಗಿ ಕಂಡುಬರುತ್ತವೆ.

ಇದು ಜೈನ ಧರ್ಮದ ಒಂದು ವೈಶಿಷ್ಟ್ಯವೇ ಆಗಿದೆ. ಜೈನ ವಾಙ್ಮಯವು ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ ಮತ್ತು ದ್ರವ್ಯಾನುಯೋಗ ಎಂಬ 4 ವಿಭಾಗವಾಗಿದೆ. ಅವುಗಳಲ್ಲಿ ಪ್ರಥಮಾನು ಯೋಗವು ಪ್ರಸಿದ್ಧವಾದುದು. ಈ ವಿಭಾಗದಲ್ಲಿ ಹಲವು ಮಂದಿ ಮಹಾ ಪುರುಷರ ಜೀವನ ಚರಿತ್ರೆಯು ಅವರ ಹಲವು ಭವಾವಳಿಗಳ ಸಹಿತ ನಿರೂಪಣೆಯಾಗಿದೆ.

ಭವಾವಳಿ ವಿಚಾರವು ಜೈನ ಪುರಾಣ ಸಾಹಿತ್ಯಕ್ಕೆ ಹಿನ್ನೆಲೆಯಾಗಿ ನಿಂತಿದೆ. ಪುರಾಣದ ಯಾವ ವ್ಯಕ್ತಿಗಳ ವಿಷಯ ಬಂದರೂ ಅವನ ಏಳು ಬೀಳುಗಳಿಗೆ ಕಾರಣವನ್ನು ತಿಳಿಯಲು ಬೇಕಾದ ಭವಾವಳಿಯ ನಿರೂಪಣೆ ಸಿಗುತ್ತದೆ. ಈ ನಿರೂಪಣೆಯಲ್ಲಿ ಜೀವನು ಹೇಗೆ ಕರ್ಮಬಂಧಿತನಾಗುತ್ತಾನೆ. ಹೇಗೆ ಎಲ್ಲಿ ಅವುಗಳ ಫಲಗಳನ್ನು ಅನುಭವಿಸುತ್ತಾನೆ. ಅವು ಬಂಧವಾಗಲು ಅವನು ಯಾವ ಆಚರಣೆಯನ್ನು ಮಾಡಿದ್ದ, ಅದರಿಂದ ಬಿಡುಗಡೆ ಹೇಗೆ ಎಂಬುದು ನಿರೂಪಿತವಾಗಿರುತ್ತದೆ. ಈ ಭವಾವಳಿಯನ್ನು ಕೇಳುವುದರಿಂದ ಜೀವದ ಉದ್ಧಾರದ ಮಾರ್ಗೋಪಾಯವು ದೊರೆಯುತ್ತದೆ. ತಾನು ಅನಾದಿಕಾಲದಿಂದಲೂ ಬಂಧಿಸಿಕೊಂಡು ಬಂದ ಕರ್ಮದ ಹೊರೆಯನ್ನು ಹೇಗೆ ಕಳೆದುಕೊಳ್ಳಬಹುದು ಎಂಬ ಬೋಧೆಯು ಈ ಭವಾವಳಿಯಿಂದ ದೊರೆಯುತ್ತದೆ. ಯಾವ ಜೀವವು ಉನ್ನತಿಯನ್ನು ಹೊಂದಲು ಯಾವ ಭವದಲ್ಲಿ ಅದಕ್ಕೆ ಬೋಧಿ ಲಾಭವಾಯಿತು ಎಂಬ ಜೀವನದ ಚಿತ್ರಣವು ಈ ಭವಾವಳಿಯಿಂದ ದೊರೆಯುತ್ತದೆ. ಪ್ರತಿಯೊಂದು ಸಂಸಾರೀ ಜೀವಕ್ಕೂ ತನ್ನದೇ ಆದ ಭವ ಪರಂಪರೆಯ ಸಾಲೇ ಇದೆ.

ಮಹಾಪುರಾಣದಲ್ಲಿ ಬರುವ ಆದಿ ತೀರ್ಥಂಕರರು ಜನ್ಮ ತಾಳುವುದಕ್ಕೆ ಹಿಂದಿನ ಅನಂತ ಭವಗಳನ್ನೆತ್ತಿದ್ದರೂ ಅವರಿಗೆ ಮಹಾಬಲನೆಂಬ ಖೇಚರನ ಜನ್ಮದಲ್ಲಿ ಕಾಲಲಬ್ಧಿ ಒದಗಿ ಆತ್ಮೋನ್ನತಿಯನ್ನು ಹೊಂದುತ್ತಾ ಮುಂದಿನ

ಜನ್ಮಗಳಲ್ಲಿ ಉನ್ನತ ಮಟ್ಟಕ್ಕೆ ಏರುತ್ತಾ ಏರುತ್ತಾ ವೃಷಭನಾಥರಾಗಿ ಮುಕ್ತರಾದರು.

ಒಬ್ಬ ರಾಜನು ತನ್ನ ಉದ್ಯಾನವನಕ್ಕೆ ಓರ್ವ ಮುನೀಶ್ವರರು ಬಂದಿದ್ದಾರೆಂದು ಕೇಳಿ ಅವರ ದರ್ಶನಕ್ಕಾಗಿ ಹೊರಟು ದಾರಿಯಲ್ಲಿ ಒಂದು ಮರದ ಕೆಳಗೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ನಂತರ ಮುನೀಶ್ವರರು ಇರುವ ಸ್ಥಳಕ್ಕೆ ಹೋಗಿ ಅವರಿಗೆ ವಂದಿಸಿ ಎದುರಿಗೆ ಕುಳಿತು ಧರ್ಮೋಪದೇಶವನ್ನು ಕೇಳಿದನು. ನಂತರ ಅವನು ನನಗೆ ಇನ್ನೆಷ್ಟು ಭವದಲ್ಲಿ ಮುಕ್ತಿಯಾಗುವುದೆಂದು ಆ ಮುನಿಗಳನ್ನು ಕೇಳಿದನು. ಅದಕ್ಕೆ ಆ ಮುನೀಂದ್ರರು ಅವಧಿಯಿಂದ ಆ ರಾಜನ ಭವಗಳನ್ನು ತಿಳಿದು "ಹೇ ರಾಜ ನೀನು ಬರುವಾಗ ಯಾವ ಮರದಡಿ ಕುಳಿತು ವಿಶ್ರಾಂತಿ ಪಡೆದೆಯೋ ಮತ್ತೆ ನೀನು ಹೋಗುವಾಗ ಆ ಮರದಲ್ಲಿ ಎಷ್ಟು ಎಲೆಗಳಿರುತ್ತವೋ ಅಷ್ಟು ಭವಗಳಲ್ಲಿ ನೀನು ಮುಕ್ತನಾಗುವೆ ಎಂದು ಹೇಳಿದರು. ರಾಜನಿಗೆ ಸಂತೋಷವಾಯಿತು. ಆದರೆ ಆತನ ಪಕ್ಕದಲ್ಲಿ ಅವನ ಮಕ್ಕಳೂ, ಮಂತ್ರಿ ಮೊದಲಾದ ಪರಿವಾರವೆಲ್ಲಾ ನಕ್ಕರು. ಅವರ ನಗುವಿಗೆ ಕಾರಣವೇನೆಂದು ರಾಜನು ಕೇಳಿದಾಗ ಆ ಮರದ ಎಲೆಗಳು ಅಸಂಖ್ಯಾತವಾಗಿವೆ ಅಷ್ಟು ಭವಗಳನ್ನು ಎತ್ತಿದ ಮೇಲೆಲ್ಲವೇ ನಿಮಗೆ ಮುಕ್ತಿ. ಅದನ್ನು ಇವರೇ ಹೇಳಬೇಕೆ? ಎಂದರು. ರಾಜನು ಸಂತೋಷದಿಂದಲೇ ನನ್ನ ಭವಗಳು ಅಷ್ಟಕ್ಕೇ ಸೀಮಿತವಾಯಿತಲ್ಲಾ. ಅನಂತಭವಗಳಾಗುವುದಿಲ್ಲವಲ್ಲಾ. ನಾನಂತೂ ಭವ್ಯನೆಂದು ನನಗೆ ಸಂತೋಷವಾಯಿತು ಎಂದನು. ಗುರುಗಳಿಗೆ ವಂದಿಸಿ ತನ್ನರಮನೆಯ ಕಡೆಗೆ ಹೊರಟು ತಾನು ವಿಶ್ರಾಂತಿ ಪಡೆದ ಮರದವಿದ್ದಕಡೆ ಬಂದನು. ಆದರೆ ಆ ಮರವನ್ನು ಒಂದು ಆನೆಯು ಕೊಂಬೆಗಳನ್ನೆಲ್ಲಾ ಮುರಿದು ಚೆಲ್ಲಾಪಿಲ್ಲಿ ಮಾಡಿತ್ತು. ಅದರಲ್ಲಿ ಒಂದೇ ಒಂದು ಕೊಂಬೆ ಮಾತ್ರ ಇತ್ತು. ಅದರಲ್ಲಿ ಕೇವಲ 5-6 ಎಲೆಗಳು ಮಾತ್ರ ಇದ್ದವು. ಅದನ್ನು ಕಂಡ ರಾಜ, ಮಗ ಮತ್ತು ಮಂತ್ರಿ ಮೊದಲಾದ ಪರಿವಾರವೆಲ್ಲಾ ಚಕಿತರಾದರು. ರಾಜನಿಗಂತೂ ಸಂತೋಷವಾಯಿತು. ಕೂಡಲೇ ಅಲ್ಲಿಯೇ ತನ್ನ ಕಿರೀಟವನ್ನು ತನ್ನ ಮಗನಿಗಿಟ್ಟು ಸೀದಾ ಆ ಮುನೀಶ್ವರರ ಬಳಿ ಬಂದು ವೈರಾಗ್ಯ ಹೊಂದಿ ದೀಕ್ಷೆ ತೆಗೆದುಕೊಂಡನು. ಆತನು ಆಸನ್ನಭವ್ಯನಾಗಿದ್ದನು. ಹೀಗೆ ಭವಾವಳಿಯಿಂದ ಆತ್ಮಕಲ್ಯಾಣಕ್ಕೆ ಮಾರ್ಗದರ್ಶನ ದೊರೆಯುತ್ತದೆ.

ಹಲವರು ತಮ್ಮ ಭವಾವಳಿಯನ್ನು ಕೇಳಿ ಕರ್ಮದ ವೈಚಿತ್ರ್ಯಕ್ಕೆ ಬೆರಗಾಗಿ ವೈರಾಗ್ಯ ಹೊಂದಿ ತಮ್ಮಾತ್ಮ ಕಲ್ಯಾಣವನ್ನು ಹೊಂದಿದವರ ಉದಾಹರಣೆಗಳು ಪುರಾಣಗಳಲ್ಲಿ ದೊರೆಯುತ್ತವೆ. ಪಂಪ, ರನ್ನ, ಪೊನ್ನ, ಜನ್ನ ಮೊದಲಾದ



ಹಲವಾರು ಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿ ಭವಾವಳಿಯ ಚಿತ್ರಣವನ್ನು ಬಹು ಬೋಧಪ್ರದವಾಗಿ ಮಾಡಿದ್ದಾರೆ. ಭವವೆಂಬುದು ಮರಿಗೆ ಮರಿ ಇಕ್ಕುತ್ತಾ ಸಾಗಿ ಜೀವಿಯನ್ನು ದುಃಖಿಯನ್ನಾಗಿ ಮಾಡುವುದು.

ಯಶೋಧರನು ತನ್ನ ತಾಯಿಯ ಮಾತಿಗೆ ಕಟ್ಟುಬಿದ್ದು ಮಾರಿಗೆ ಹಿಟ್ಟಿನ ಕೋಳಿಯನ್ನು ಬಲಿಕೊಟ್ಟು ಸಂಕಲ್ಪ ಹಿಂಸೆಯ ಫಲವನ್ನು ಅನುಭವಿಸಲು ಏಳು ಭವಗಳನ್ನೆತ್ತಬೇಕಾಯ್ತು. ದೇಹಧಾರಣೆ, ಭವಪರಂಪರೆಗೆ ಪೂರ್ವಕೃತ, ಕರ್ಮವೇ ಬೀಜವೆಂಬುದನ್ನು ಭವಾವಳಿಯ ಚಿತ್ರಣದಲ್ಲಿ ಕಾಣಬಹುದು.

ಹೀಗೆ ಭವಾವಳಿಯ ಕೋಶದಂತಿರುವ ಮಹಾಪುರಾಣ, ಹರಿವಂಶ, ಪಉಮಚರಿಉ, ವಡ್ಡಾರಾಧನೆ, ಆದಿಪುರಾಣ, ಪುಣ್ಯಾಸ್ರವ ಕಥಾಕೋಶ ಮುಂತಾದವುಗಳು ಭವಾವಳಿ ತತ್ತ್ವದ ಮುಖಾಂತರ ಅಧ್ಯಾತ್ಮವನ್ನು ಪ್ರತಿಪಾದಿಸುತ್ತವೆ.

ಹೀಗೆ ಜಿನವಾಣಿಯು ಕರ್ಮವೈಚಿತ್ರದ ಭವಾವಳೀ ತತ್ತ್ವ ನಿರೂಪಣೆ ಎಂಬ ಭದ್ರವಾದ ಪೀಠದ ಮೇಲೆ ವಿರಾಜಮಾನಳಾಗಿದ್ದಾಳೆ ಮತ್ತು ಆಕೆಯ ದೃಷ್ಟಿ ಯಾವಾಗಲೂ ಮುಕ್ತಿ ಮಹಲ್ಲಿನ ಕಡೆಯೇ ಇದೆ. ಈ ಭವಾವಳೀ ವರ್ಣನಾ ಚಾತುರ್ಯದಿಂದ ಜೈನ ಸಾಹಿತ್ಯವು ವಿಶ್ವದಲ್ಲಿಯೇ ವಿಶಿಷ್ಟ ಸ್ಥಾನವನ್ನು ಹೊಂದಿದೆ.

ಒಂದು ಜೀವಿಯು ಮುಕ್ತವಾದ ಬಗ್ಗೆ, ಇನ್ನೊಂದು ಜೀವಿಯು ಅನಂತ ಸಂಸಾರಿಯಾದ ಬಗ್ಗೆ ಮತ್ತೊಂದು ಅಲ್ಪ ಸಂಸಾರಿಯಾಗಿ ಪ್ರಗತಿಯತ್ತ ಸಾಗುತ್ತಿರುವ ಬಗ್ಗೆ ಈ ಭವಾವಳಿ ತತ್ತ್ವವು ತಿಳಿಸುತ್ತದೆ.

ಯಾವ ಜೀವಿಗೆ ಸಮ್ಯಕ್ತ್ವವೆಂಬ ಸಂಪದವು ಯಾವ ಭವದಲ್ಲಿ ದೊರೆಯುತ್ತದೋ ಅದರ ಬಂಡವಾಳದಿಂದ ಆ ಜೀವಿಯು ಸಾಧನಾಪಥದಲ್ಲಿ ಸಾಗಿ ಜೀವನ್ಮುಕ್ತವಾಗುತ್ತದೆ. ಇದು ಭವಾವಳಿಯಿಂದ ಗೊತ್ತಾಗುತ್ತದೆ. ಭವಾವಳೀ ಸಾಹಿತ್ಯವು ಓದುಗರ ಕುತೂಹಲವನ್ನು ಕೆರಳಿಸಿ ಸತ್ಪರಿಣಾಮವನ್ನುಂಟು ಮಾಡುತ್ತದೆ.

ಮಹಾಪುರುಷರ ಭವಾವಳಿಗಳೆಲ್ಲಾ ಅವರು ಅನುಭವಿಸಿದ ಜೀವನ ಚಿತ್ರಣವು ನಮಗೆ ಆದರ್ಶವಾಗಿ ನಮ್ಮ ಬಾಳನ್ನು, ನಡೆ ನುಡಿಗಳನ್ನು ತಿದ್ದಿಕೊಂಡು ಸಾಗಲು ಸಹಕಾರಿಯಾಗುತ್ತದೆ. ಪುರಾಣಗಳಲ್ಲಿ ನಿರೂಪಿತವಾಗಿರುವ ಭವಾವಳಿಗಳನ್ನು ಅವಧಿಜ್ಞಾನಧಾರಿಗಳೋ, ಅರಿಹಂತ ಜಿನೇಂದ್ರರೋ, ಕೇವಲಿಗಳೋ ಹೇಳಿ ಜೀವಿಗಳಿಗೆ ಹಳೆಯ ನೆನಪನ್ನು ಮಾಡಿಸಿ ಮುಂದೆ ಉತ್ತಮ ವಾದ ಮಾರ್ಗದಲ್ಲಿ

ಸಾಗಲು ಪ್ರೇರಣೆ ನೀಡುತ್ತಾರೆ. ಅಂದರೆ ಮುಂದಿನ ಬಾಳು ಹಸನಾಗಲು ಹಿಂದಿನ ಭವಾವಳಿಯ ನೆನಪು ಸಹಕಾರಿಯಾಗುತ್ತದೆ.

ಇದರಿಂದ ಜೀವಿಯು ಕರ್ಮದ ಆಸ್ರವ. ಬಂಧ-ಸಂವರ-ನಿರ್ಜರೆ- ಮೋಕ್ಷಗಳ ಶಾಂತ್ರಿಕ ಉಪಾಯವನ್ನು ತಿಳಿಸಿ ಬಂಧ-ಮೋಕ್ಷಗಳನ್ನೂ, ಜೀವಿಯ ಏಳು ಬೀಳುಗಳನ್ನು ತಿಳಿದು ತನ್ನಾತ್ಮೋನ್ನತಿಯ ಕಡೆ ಸಾಗಲು ಸಹಾಯವಾಗುತ್ತದೆ.

## 81. ಸಲ್ಲೇಖನವು ಸಾಧಕನ ಸಾರ್ಥಕತೆ

'ಜಾತಸ್ಯ ಮರಣಂ ಧ್ರುವಂ' ಎಂಬಂತೆ ಹುಟ್ಟಿದಮೇಲೆ, ಸಾವು ನಿಶ್ಚಿತ. ಈ ಹುಟ್ಟು-ಸಾವುಗಳ ಮಧ್ಯೆ ತಾನು ಹೇಗೆ ಬಾಳಿದೆ ಎಂಬುದು ಮುಖ್ಯ.

ಎಷ್ಟು ಕಾಲ ಬಾಳಿದೆ ಎನ್ನುವುದಕ್ಕಿಂತ ಬಾಳಿದಷ್ಟು ಕಾಲವೂ ಸರಳ, ಸಭ್ಯ-ಸಾತ್ವಿಕನಾಗಿ ಕರ್ತವ್ಯ ಪಾರಾಯಣನಾಗಿ, ಪ್ರಾಮಾಣಿಕನಾಗಿ, ಧಾರ್ಮಿಕನಾಗಿ ಆಚಾರವಂತನಾಗಿ ನೀತಿವಂತನಾಗಿ ಜನರಲ್ಲಿ ಹೊಂದಿಕೊಂಡು ಶಾಂತಿಯಿಂದ ಬಾಳಿದರೆ ಆ ಬಾಳಿಗೊಂದು ಬೆಲೆ ಬರುತ್ತದೆ. ಬಾಳು ಸಾರ್ಥಕವಾಗುತ್ತದೆ. ಮಾನವನು ನಿಜವಾದ ಅರ್ಥದಲ್ಲಿ ಮಾನವೀಯ ಗುಣಗಳನ್ನು ಮೈಗೂಡಿಸಿ ಕೊಂಡು ಬಾಳಿದರೆ ತನಗೆ ಇಹಪರಗಳಲ್ಲಿ ಸುಖ, ಶಾಂತಿ ನೆಮ್ಮದಿ, ಕೀರ್ತಿ ಗೌರವಗಳು ಲಭ್ಯವಾಗುವವು.

ಮರಣ ಸಂಭವಿಸುವುದು ಯಾವಾಗ, ಹೇಗೆ ಎಂಬುದನ್ನು ನಿರ್ಧರಿಸ ಲಾಗುವುದಿಲ್ಲವಾದರೂ ಅದು ಒಂದಲ್ಲ ಒಂದು ದಿನ ಆಗಿಯೇ ತೀರುತ್ತದೆ. ನಿರರ್ಥಕವಾಗಿ ಸಾಯುವುದಕ್ಕಿಂತ ಸಲ್ಲೇಖನಾಸಹಿತ ಸಮಾಧಿಯಾಗುವುದು ಸಾಧಕನ ಜೀವದ ಸಾರ್ಥಕವಾಗುವುದು.

ಹಾಗಿದ್ದಮೇಲೆ ಸಲ್ಲೇಖನ ಎಂದರೇನು?

ಶ್ರಾವಕರಾಗಲೀ ತ್ಯಾಗಿಗಳಾಗಲೀ ತನಗೆ ಮರಣವು ಸಮೀಪಿಸುವುದನ್ನು ಕೆಲವು ಸೂಚನೆ, ಶಕುನ, ನಿಮಿತ್ತ, ಜಾತಕ, ಘಟನೆಗಳಿಂದು ಅಲ್ಪಸ್ವಲ್ಪವಾಗಿ ಯಾದರೂ ತಿಳಿಯಬಹುದು. ಅಥವ ತನಗೆ ಇನ್ನು ಜೀವಿಸುವುದು ಆಗುವುದಿಲ್ಲ. ಮರಣ



ಸನ್ನಿಹಿತವಾಗಿದೆ, ಅಸಾಧ್ಯವಾದ ರೋಗ, ದುರ್ಘಟನೆ, ಬಹಳ ವಯಸ್ಸಾಗಿ ನಿಃತ್ರಾಣನಾಗಿರುವುದೂ, ದುರ್ಭಿಕ್ಷ ಬಂದಾಗ, ತನಗೆ ಇನ್ನು ಚಾರಿತ್ರವನ್ನು ಪಾಲಿಸಲು ಅಸಾಧ್ಯ ಎನಿಸಿದಾಗ, ಅಸಾಧ್ಯವಾದ ಉಪಸರ್ಗ ಗಳಾದಾಗ, ಇನ್ನಾವ ಪ್ರತೀಕಾರ, ಚಿಕಿತ್ಸೆ, ಉಪಾಯಗಳನ್ನು ಮಾಡಿದರೂ ತಾನಿನ್ನು ಉಳಿಯುವುದಿಲ್ಲ ವೆಂದು ಗೊತ್ತಾದಾಗ ಶಾಂತಿಯಿಂದ, ಸಮಾಧಾನ ದಿಂದ ಶರೀರ ತ್ಯಾಗವನ್ನು ಮಾಡುವುದೇ ಸಲ್ಲೇಖನ.

ಸಮಾಧಾನದಿಂದ ತನ್ನ ಶರೀರ, ಸಂಸಾರ, ಪರಿವಾರ, ಪರಿಗ್ರಹಗಳ ಮೋಹವನ್ನು ತೊರೆದು ಕ್ರಮಕ್ರಮವಾಗಿ ಆಹಾರಪಾನಗಳನ್ನು ತ್ಯಜಿಸಿ, ಕ್ಷಮಾಭಾವದಿಂದ ಜಿನೇಂದ್ರರ, ಪಂಚ ಪರಮೇಷ್ಠಿಗಳ ಸ್ಮರಣೆ ಮಾಡುತ್ತ ದೇಹತ್ಯಾಗ ಮಾಡುವುದೇ ಸಲ್ಲೇಖನ.

ಸಲ್ಲೇಖನದಲ್ಲಿ ಶರೀರಸಲ್ಲೇಖನ ಮತ್ತು ಕಷಾಯ ಸಲ್ಲೇಖನವೆಂದು ಎರಡು ವಿಧ. ಉಪವಾಸಾದಿ ಬಾಹ್ಯತಪಗಳಿಂದ, ಬದುಕುವುದನ್ನು ಇಚ್ಛಿಸದೆ, ಶರೀರವನ್ನು ಕೃಶ ಮಾಡುವುದು ಶರೀರ ಸಲ್ಲೇಖನ. ಕ್ರೋಧ, ಮಾನ, ಮಾಯಾಲೋಭವೇ ಮುಂತಾದ ಕಷಾಯಗಳನ್ನು ರಾಗ ದ್ವೇಷ, ಮೋಹಗಳನ್ನು ಕಳೆದುಕೊಳ್ಳುವುದು ಕಷಾಯ ಸಲ್ಲೇಖನವೆನಿಸುವುದು.

ತನಗೆ ಯಾವ ವಿಘ್ನಗಳು ಬಂದರೂ ಹಿಡಿದಿರುವ ವ್ರತ-ನೇಮ ನಿಯಮ ಗಳನ್ನು ಕಳೆದುಕೊಳ್ಳಬಾರದು. ಇದೂ ಒಂದು ರೀತಿಯ ತಪವೆಂದು ಪಾಲಿಸಬೇಕು. ಪ್ರಾಣ ಹೋದರೂ ತನ್ನ ನಿಯಮ, ತನ್ನ ನೇಮ, ನಿಷ್ಠೆ, ತನ್ನ ವ್ರತ-ನಿಷ್ಠೆಗಳನ್ನು ಬಿಡಬಾರದು.

ಸಮ್ಯಗ್ದೃಷ್ಟಿಗಳು, ನಿಷ್ಠರಾದ ಶ್ರಾವಕರು, ಬ್ರಹ್ಮಚಾರಿಗಳು, ಮುನಿ, ಆರ್ಯಿಕೆಯರೂ ತಮ್ಮ ಜೀವಿತ ಕಾಲದಲ್ಲಿ ಕೈಗೊಂಡ ವ್ರತ-ಧರ್ಮ ಸಾಧನೆ ಆತ್ಮೋನ್ನತಿಯ ನಿಯಮಗಳು, ನೇಮ ನಿಷ್ಠೆಗಳನ್ನು ನಿರ್ದೋಷವಾಗಿ ಪಾಲಿಸುತ್ತಾ ಅನಾದಿಕಾಲದಿಂದ ಆತ್ಮನೊಂದಿಗೆ ಅಂಟಿಬಂದಿರುವ ಕರ್ಮಗಳನ್ನು ಕಳೆದುಕೊಳ್ಳಲು ಜಪ, ತಪ, ಧ್ಯಾನಗಳನ್ನು ಆಚರಿಸುತ್ತಾರೆ. ಬರುತ್ತಾ ಬರುತ್ತಾ ತನ್ನ ಶರೀರದ ಮಮತ್ವವನ್ನು ತ್ಯಾಗ ಮಾಡುತ್ತಾರೆ. ಸಾವಿಗೆ ಅಂಜುವುದಿಲ್ಲ. ಮರಣವನ್ನು ಸ್ವಾಗತಿಸುತ್ತಾರೆ. ಅಂತಹವರು ಸಲ್ಲೇಖನ ನಿಯಮವನ್ನು ಕೈಗೊಂಡು ಉತ್ತಮವಾದ, ಶುಭವಾದ, ಶುದ್ಧವಾದ ಭಾವದಿಂದ ಸತ್ಪರಿಣಾಮದಿಂದ ಶಾಂತಿ, ಸಮಾಧಾನದಿಂದ ಶರೀರವನ್ನು ತ್ಯಾಗ ಮಾಡುವುದೇ ಸಲ್ಲೇಖನ.

ಭರತ ಚಕ್ರವರ್ತಿಯು ಆದಿನಾಥ ಭಗವಾನರ ಸ್ತೋತ್ರ ಮಾಡುತ್ತಾ 'ಸಮಾಧಿ ಮರಣಂ ಅಮೋಘಂ'' ಇದು ನನಗೆ ದೊರೆಯಲಿ, ಇನ್ನಾವ ಪದವಿ, ಗತಿ, ವೈಭವವನ್ನು ನಾನು ಬೇಡುವುದಿಲ್ಲ ಎಂದು ಪ್ರಾರ್ಥಿಸಿದ್ದಾನೆ. ಆದ್ದರಿಂದ ಈ ಸಮಾಧಿ ಮರಣವು ದುರ್ಲಭವಾದುದು. ಅದು ಅಮೋಘವಾದುದು. ಸಮಾಧಾನದಿಂದ ಮರಣ ಹೊಂದಲು ತನ್ನಲ್ಲಿ ಮೊದಲಿನಿಂದಲೂ ಶಾಂತಿ-ಸಮಾಧಾನ-ಸರಳತೆ ಧರ್ಮಾಚರಣೆಗಳು ಮೈಗೂಡಿರಬೇಕು. ಇದು ಸಲ್ಲೇಖನದೊಂದಿಗೆ ಆದರೆ ಅತಿ ಉತ್ತಮವಾದ ಆತ್ಮೋನ್ನತಿಯ ಸದ್ಗತಿಯು ಲಭ್ಯವಾಗುವುದು.

ಅನೇಕ ಬಗೆಯ ಪರಿಗ್ರಹಗಳಿಗೆ ಅಂಟಿಕೊಂಡವನೂ, ಸದಾ ಅಸಮಾಧಾನ ದಿಂದಿರುವವನೂ, ಅವ್ರತಿಯೂ, ಕೋಪಿಯೂ, ಗರ್ವಿಯೂ, ಮಾಯಾಚಾರಿಯೂ, ಲೋಭಿಯೂ, ದುರಾಚಾರಿಯೂ ಕೊನೆಯಲ್ಲಿ ಸಮಾಧಾನದಿಂದ ಸಲ್ಲೇಖನಸಹಿತ ಮರಣ ಹೊಂದಲಾಗುವುದಿಲ್ಲ. ಸಂಸಾರ, ಶರೀರ ಭೋಗಗಳಲ್ಲಿ ಮೊದಲಿನಿಂದಲೂ ಮೋಹವನ್ನು ಕ್ಷೀಣಿಸಿದವನು, ಶಾಂತಿಯಿಂದ ಮರಣ ಹೊಂದಲು ಸಾಧ್ಯ.

"ಶರೀರ ಮಾದ್ಯಂ ಬಲು ಧರ್ಮ ಸಾಧನಂ'' ಎಂಬಂತೆ ಧರ್ಮ ಸಾಧನೆಯಿಂದಲೇ ಈ ನರಜನ್ಮವನ್ನು ಹೊತ್ತ ಶರೀರದ ಸಾರ್ಥಕತೆ. ಆದ್ದರಿಂದ ಮರಣ ಸಮಯದಲ್ಲೂ ಧರ್ಮವನ್ನು ಮರೆಯದೆ ಧರ್ಮಕಾರ್ಯವಾದ ಸಲ್ಲೇಖನವನ್ನು ಸ್ವೀಕರಿಸಿ ಶರೀರತ್ಯಾಗ ಮಾಡುವುದು ಧಾರ್ಮಿಕನ ಲಕ್ಷಣವಾಗಿದೆ.

ಆತ್ಮಹತ್ಯೆ, ವಿಷಸೇವಿಸುವುದು, ಪರ್ವತದಿಂದ ಬೀಳುವುದು, ರೈಲಿಗೆ ಸಿಗುವುದು, ನದಿಗೆ ಬೀಳುವುದು, ನೇಣು ಹಾಕಿಕೊಳ್ಳುವುದೂ ಮತ್ತು ಕೋಪತಾಪದಿಂದ ಜೀವನದಲ್ಲಿ ನಿರಾಶನಾಗಿ ಬಡತನದಿಂದಲೋ, ಮತ್ತೊಬ್ಬರ ಮೇಲಿನ ಸೇಡಿನಿಂದಲೋ, ಭಗ್ನ ಪ್ರೇಮದಿಂದಲೋ ಜೀವನದಲ್ಲಿ ನಿರಾಸೆ, ಜಿಗುಪ್ಸೆಯಿಂದಲೋ ಅತೃಪ್ತಿಯಿಂದಲೋ, ತನ್ನ ಇಷ್ಟ ನೆರವೇರಲಿಲ್ಲ ವೆಂದಾಗಿಯೋ, ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದೋ, ಬೇಜಾರಾಗಿಯೋ, ಯಾವುದಾದರೊಂದು ಘಟನೆಯಿಂದ ಸಾಯುವುದು ಆತ್ಮಹತ್ಯೆ ಯಾಗುತ್ತದೆ. ಆದರೆ ಪ್ರಸನ್ನಚಿತ್ತದಿಂದ ತುಂಬು ಜೀವನ ನಡೆಸಿ, ಭಯ, ಕೋಪ, ತಾಪ, ಆಸೆ ಕಷಾಯಗಳನ್ನು ಬಿಟ್ಟು ತನ್ನ ಅಂತ್ಯಸಮಯದಲ್ಲಿ ಭಗವನ್ನಾಮಸ್ಮರಣೆ ಮಾಡುತ್ತಾ ಉಪವಾಸದಿಂದ ಶರೀರವನ್ನು ಕೃಶಗೊಳಿಸಿ ಮರಣಹೊಂದುವುದು ಆತ್ಮಹತ್ಯೆಯಲ್ಲ. ಅದು ಸಲ್ಲೇಖನ ಸಹಿತ ಸಮಾಧಿ ಮರಣವೆನ್ನುತ್ತಾರೆ.



ಮರಣ ಸಮೀಪಿಸಿದಾಗ ಅಥವಾ ತಾನು ಇನ್ನು ಉಳಿಯಲು ಅಸಾಧ್ಯ ವೆಂದಾಗ ತನ್ನ ಅಶುಭ ಭಾವನೆಯನ್ನು ತ್ಯಜಿಸಿ ಶಾಂತಿ ಸಮಾಧಾನದಿಂದ ಶರೀರ ರದ ಮಮಕಾರವನ್ನು ತ್ಯಜಿಸಿ ನಿರಾಹಾರಿಯಾಗಿ ಮರಣ ಹೊಂದುವುದು ಆತ್ಮ ಹತ್ಯೆಯಾಗುವುದಿಲ್ಲ.

ಆತ್ಮಹತ್ಯೆ ಮಾಡಿಕೊಳ್ಳುವವನಲ್ಲಿ ಅತೃಪ್ತಿ, ಅಪಮಾನ, ಮನಸ್ಸಿನ ವೇದನೆ, ಅಸ್ಥಿರತೆ, ಭಯ, ಜಿಗುಪ್ಸೆ, ಅಸಹಾಯಕತೆ, ರೋಗ, ಮಾನಸಿಕ ದಣಿವು ಇರುತ್ತದೆ. ಮಾನಸಿಕ ಒತ್ತಡ, ಅಪರಾಧೀತನ, ದುಃಖ, ನಿರುತ್ಸಾಹ, ನಿರಾಸೆಗಳು ಇರುತ್ತವೆ. ಧಾರ್ಮಿಕ, ನೈತಿಕ ಸದಾಚಾರದ ಭಾವನೆ ಇರುವುದಿಲ್ಲ.

ಆದರೆ ಸಲ್ಲೇಖನ ತೆಗೆದುಕೊಂಡ ಧರ್ಮನಿಷ್ಠರಲ್ಲಿ ಇವಾವೂ ಇರುವುದಿಲ್ಲ. ತಾಳ್ಮೆ, ಶಾಂತಿ, ಧೈರ್ಯ, ಸಹನೆ, ಸಮಾಧಾನ, ಉತ್ಸಾಹ ಭಕ್ತಿ, ಸ್ಥಿರಚಿತ್ತತೆ, ನಿರ್ಮೋಹ ಇರುತ್ತದೆ.

ಈ ಹಿಂದೆ ಆಗಿಹೋದ ಎಷ್ಟೋ ಸಾಧಕ ಶ್ರಾವಕರೂ, ತ್ಯಾಗಿಗಳೂ, ಮುನಿಗಳೂ, ಈ ರೀತಿಯಾದ ಸಲ್ಲೇಖನವನ್ನು ಕೈಗೊಂಡು ಆತ್ಮೋನ್ನತಿಯನ್ನು ಹೊಂದಿದ್ದಾರೆ. ಸಲ್ಲೇಖನವನ್ನು ಸಾಧಿಸುವ ಮನೋಭಾವನೆ ಉಂಟಾಗುವುದು ಅಸಾಧ್ಯ. ಆದರೆ ಅದು ಉಂಟಾಯಿತೆಂದರೆ ಆತ ಭವ್ಯ, ಧನ್ಯ, ಆತ್ಮೋನ್ನತಿಯ ಸಾಧಕನಾಗಿರುತ್ತಾನೆ.

ಜೈನರಲ್ಲಿ ಶ್ರಾವಕರಾಗಲೀ, ತ್ಯಾಗಿಗಳಾಗಲೀ ಈ ಸಲ್ಲೇಖನವು ಒಂದು ವಿಧಿ ನಿಯಮವಾಗಿದೆ. ಇದನ್ನು ಅವರು ಕ್ರಮವಾಗಿ ಸಾಧಿಸುತ್ತಾರೆ. ವ್ರತ, ನೇಮ, ನೋಂಪಿ, ಆರಾಧನೆಗಳಲ್ಲಿ ಉಪವಾಸವನ್ನು ಮಾಡುತ್ತಾ ಬಂದಿರುತ್ತಾರೆ. ಇದು ಮುಂದುವರಿದು ಮರಣದವರೆಗೂ ಉಪವಾಸ ಮಾಡುವುದು ಮರಣಾಂತಕೀ ಸಲ್ಲೇಖನವೆನ್ನುವರು. ಹಣ್ಣಾದ ಎಲೆ ತಾನಾಗಿಯೇ ಉದುರುವಂತೆ, ಎಣ್ಣೆ ತೀರಿದ ನಂತರ ದೀಪ ತಾನಾಗಿಯೇ ಆರುವಂತೆ ಜೀವನದ ಕೊನೆಯು ತಾನಾಗಿಯೇ ಸಂಭವಿಸುತ್ತದೆ. ಧಾರ್ಮಿಕರಿಗೆ, ಸಾಧಕರಿಗೆ, ಸಾಧು ಸಂತರಿಗೆ ಮಹಾತ್ಮರಿಗೆ ತನ್ನ ಮರಣದ ಸೂಚನೆಗಳು ಒಂದಲ್ಲ ಒಂದು ವಿಧದಲ್ಲಿ ಗೊತ್ತಾಗುತ್ತದೆ. ಅದು ತಿಂಗಳ ಅವಧಿಯಾಗಿರಬಹುದು, ಅಂದೇ ಆಗಿರಬಹುದು. ಆ ಸಮಯದಲ್ಲಿ ಮರಣಕ್ಕೆ ಅಂಜದೆ ಸಮಾಧಾನದಿಂದ ಉಪವಾಸದ ನಿಯಮವನ್ನು ಸ್ವೀಕರಿಸಿ, ಕಷಾಯಗಳನ್ನು ಮೋಹವನ್ನು ತ್ಯಜಿಸಿ ಪಂಚ ಣಮೋಕಾರ ಮಂತ್ರವನ್ನು ಜಪಿಸುತ್ತಾ ಶರೀರತ್ಯಾಗ ಮಾಡುತ್ತಾರೆ. ಇದೇ ಸಲ್ಲೇಖನ.

ಕೆಲವೊಮ್ಮೆ ಬಂಧುಗಳ-ಗುರುಗಳ ಅನುಮತಿಯನ್ನು ಪಡೆಯ ಬೇಕಾಗುತ್ತದೆ. ಅವರ ಸಮ್ಮತಿ ಇದ್ದರೆ ಒಳ್ಳೆಯದು. ಮರಣವು ಮುಂಚೆ ಗೊತ್ತಾದರೆ ಆಚಾರ್ಯರ, ಗುರುಗಳ ವಿಧಿ ವಿಧಾನವನ್ನು ತಿಳಿದವರ ಬಳಿ ಹೋಗಿ ಸಲ್ಲೇಖನದ ನಿಯಮವನ್ನು ಕೈಗೊಂಡು ಯೋಗ್ಯರೀತಿಯಲ್ಲಿ ಪಾಲಿಸಬೇಕು. ದಿನೇ ದಿನೇ ಆಹಾರ ಪಾನಗಳನ್ನು ಕಡಿಮೆ ಮಾಡುತ್ತಾ ಕೊನೆಗೆ ಅದನ್ನು ತ್ಯಜಿಸಿ ಆನಂದದಿಂದ ಮರಣ ಹೊಂದುವುದು ವಾಡಿಕೆ ಇದೆ. ಆಗ ಸದ್ಭಾವ, ಜಪ, ಧರ್ಮ ಪಾರಾಯಣ, ಉಪದೇಶವನ್ನು ಕೇಳುವುದು ಅವಶ್ಯಕವಿರುತ್ತದೆ. ಇದು ಆತ್ಮಕಲ್ಯಾಣದ ಸಾಧನವಾಗಿರುತ್ತದೆ.

ಇದಕ್ಕೆ ಮೊದಲಿನಿಂದಲೇ 'ಹೇ ಭಗವಾನ್ ನನಗೆ ಅನಾಯಾಸವಾಗಿ ಮರಣವಾಗಲೀ, ದೀನಹೀನನಾಗಿ ಬಾಳದೆ ಅಂತ್ಯಕಾಲದಲ್ಲೂ ನಿಮ್ಮ ನಾಮಸ್ಮರಣೆ ಮಾಡುತ್ತಾ ಪ್ರಾಣ ಬಿಡುವಂತಾಗಲೀ'' ಎಂದು ಪ್ರಾರ್ಥಿಸುತ್ತಿರಬೇಕು. ಸಲ್ಲೇಖನ ತೆಗೆದುಕೊಳ್ಳುವಾಗ ತನ್ನ ಬಂಧು, ಪರಿವಾರದರಲ್ಲಿ ಕ್ಷಮೆ ಕೇಳಿ ''ನಾನು ಎಲ್ಲರನ್ನೂ ಕ್ಷಮಿಸುತ್ತೇನೆ. ನನ್ನನ್ನು ಎಲ್ಲರೂ ಕ್ಷಮಿಸಿರಿ, ನನಗೆ ಯಾರಲ್ಲೂ ವೈರವಿಲ್ಲ'' ಎಂದು ಕೇಳಿಕೊಳ್ಳಬೇಕು. ಆ ಸಮಯದಲ್ಲಿ ದುಃಖಿಸದೆ, ಬಂದ ಪರೀಷಹಗಳನ್ನು ಸಹಿಸಿ ಸಮಾಧಿಯನ್ನು ಸಾಧಿಸಬೇಕು.

ಆ ಸಮಯದಲ್ಲಿ ದ್ವಾದಶಾನುಪ್ರೇಕ್ಷೆ, ಭಗವತೀ ಆರಾಧನೆ ಮುಂತಾದ ವೈರಾಗ್ಯ ಪೂರಿತ ಗ್ರಂಥಗಳನ್ನು ಓದಬೇಕು, ಕೇಳಬೇಕು. ಏನೇ ಆದರೂ ವ್ರತಭಂಗ ಮಾಡಿಕೊಳ್ಳಬಾರದು.

ಸಲ್ಲೇಖನದಲ್ಲಿ ನಿಯಮ ಸಲ್ಲೇಖನ, ಯಮ ಸಲ್ಲೇಖನವೆಂದು ಎರಡು ವಿಧ.

ಇಂತಿಷ್ಟು ದಿನ, ತಿಂಗಳು, ವರ್ಷಗಳವರೆಗೆ ನಿಯಮವನ್ನು ಮಾಡಿ ಸಲ್ಲೇಖನದ ಸಾಧನೆ ಮಾಡುತ್ತಾ ಕ್ರಮವಾಗಿ ಕಷಾಯ, ಮೋಹ, ಆಹಾರ, ಮಮತ್ವಗಳನ್ನು ತ್ಯಜಿಸುತ್ತಾ ಅಂತ್ಯದಲ್ಲಿ ಎಲ್ಲವನ್ನೂ ತ್ಯಜಿಸಿ ಸಲ್ಲೇಖನ ಕೈಗೊಳ್ಳುವುದು ನಿಯಮ ಸಲ್ಲೇಖನ. ಎಷ್ಟೋ ಸಾಧಕರು 12 ವರ್ಷದ ನಿಮಯ ಸಲ್ಲೇಖನ ತೆಗೆದುಕೊಂಡು ಸಾಧಿಸುತ್ತಾರೆ.

ಒಮ್ಮೆಲೇ ಮರಣ ಹೊಂದುವವರೆಗೂ ಅನ್ನಪಾನಗಳನ್ನು ಪೂರ್ಣ ತ್ಯಜಿಸಿ ಸಮಾಧಿಯಾಗುವುದು ಯಮ ಸಲ್ಲೇಖನ.

ಸಲ್ಲೇಖನ ತೆಗೆದುಕೊಂಡ ಮೇಲೆ ಬದುಕಬೇಕೆಂಬ ಆಸೆ ಪಡುವುದೂ, ವೇದನೆಯನ್ನು ಸಹಿಸಲಾರದೆ ಬೇಗ ಪ್ರಾಣ ಹೋಗಬೇಕೆಂದು ಆಶಿಸುವುದು, ತನ್ನ



ಬಂಧು ಬಾಂಧವರನ್ನು ನೆನೆಸಿಕೊಳ್ಳುವುದೂ ಮರಣಕ್ಕೆ ಭಯ ಪಡುವುದು, ಈ ಸಲ್ಲೇಖನದ ಸಾಧನೆಯಿಂದ ಇಂತಹ ಗತಿ, ಜನ್ಮ ದೊರೆಯಲೆಂದು ಆಶಿಸುವುದೂ ಮುಂತಾದ ಅತಿಚಾರಗಳಾಗದಂತೆ ಎಚ್ಚರವಹಿಸಬೇಕು.

ಸಲ್ಲೇಖನವನ್ನು ತೆಗೆದುಕೊಂಡಾಗ ಅವರ ಉಪಚಾರವನ್ನು ಮಾಡುವ ಶ್ರಾವಕರಾಗಲೀ, ಮುನಿತ್ಯಾಗಿಗಳಾಗಲೀ, ಅವರಿಗೆ ಯಾವ ವಿಧವಾದ ಕಷಾಯ, ಮೋಹ, ಆಸೆ ಹುಟ್ಟುವಂತಹ ಕ್ರಿಯೆ, ಮಾತು, ಅಳು, ಗಡಿಬಿಡಿ, ಗೊಂದಲವನ್ನುಂಟು ಮಾಡಬಾರದು. ಭಕ್ತಿಪಾಠ ಓದುವುದು, ಪುರಾಣ-ದ್ವಾದಶಾನುಪ್ರೇಕ್ಷೆ, ಜಪ, ಭಜನೆ ಧರ್ಮೋಪದೇಶ, ವೈರಾಗ್ಯ ಭಾವನೆಗಳನ್ನು ಹೇಳುತ್ತಿರಬೇಕು.

ಸಲ್ಲೇಖನದಿಂದ ದೇಹತ್ಯಾಗ ಮಾಡಿದ ಆತ್ಮಕ್ಕೆ ತಾನು ಇಚ್ಛಿಸದಿದ್ದರೂ ಸ್ವರ್ಗಸಂಪದವು ತಾನಾಗಿಯೇ ದೊರೆಯುವುದು.

ಈ ರೀತಿ ಸಲ್ಲೇಖನದಿಂದ ಸಮಾಧಿಮರಣ ಹೊಂದಿದ ಶ್ರಾವಕರ, ರಾಜರ, ತ್ಯಾಗಿಗಳ, ಮುನಿಗಳ ಸಾಧನೆಯನ್ನು ತಿಳಿಸುವ ಕಥೆ, ಪುರಾಣ, ಇತಿಹಾಸ, ಶಿಲಾಶಾಸನಗಳು ದೊರೆಯುತ್ತವೆ.

ಸಲ್ಲೇಖನಸಹಿತ ಸಮಾಧಿ ಮರಣವು ಪಂಡಿತ ಮರಣವೆನಿಸುತ್ತದೆ. ಇದು ತನ್ನ ಬಾಳಿನ ಸಾರ್ಥಕತೆಯಾಗಿದೆ.

ಸಲ್ಲೇಖನವ್ರತವು ಮಾನವನು ತನ್ನ ಮರಣವನ್ನು ಧೈರ್ಯದಿಂದ ಸಂತೋಷದಿಂದ, ಸತ್ಪರಿಣಾಮದಿಂದ ಎದುರಿಸುವ ತತ್ತ್ವವಾಗಿದೆ.

ಶರೀರವು ಆತ್ಮನಿಂದ ಭಿನ್ನವಾದುದು. ಆತ್ಮನು ಶುದ್ಧ ಬುದ್ಧ, ನಿತ್ಯ ನಿರ್ಮಲನಾದ ಆನಂದಮಯನು, ಕರ್ಮಗಳೇ ಹುಟ್ಟು-ಸಾವುಗಳಿಗೆ ಕಾರಣ, ವ್ರತ-ನೇಮ, ನಿಯಮ-ಜಪ-ಧ್ಯಾನಗಳಿಂದ ಕರ್ಮವನ್ನು ಕ್ಷಯಿಸಬಹುದು, ದಯೆ, ಸಜ್ಜನಿಕೆ, ರತ್ನತ್ರಯಧಾರಣೆಮುಂತಾದವನ್ನು ಧರಿಸಬೇಕು. ಕ್ಷಮಾ - ಶಾಂತಿ ಗುಣವಂತನಾಗಬೇಕು ಎಂಬ ಭಾವನೆಗಳನ್ನು ಮಾನವನು ತನ್ನಲ್ಲಿ ಮೈಗೂಡಿಸಿ ಕೊಳ್ಳಬೇಕು. ಮರಣ ಶರೀರಕ್ಕೇ ವಿನಃ ಆತ್ಮನಿಗಲ್ಲ.

ಆದಕ್ಕಾಗಿ ಈ ಅಮೋಘವಾದ ಅಂತ್ಯ ಸಮಯದ ಸೌಭಾಗ್ಯವು ಒದಗಿ ಬರಲು ಮಾನವ ಸದಾ ಧರ್ಮಧ್ಯಾನ ನಿರತನಾಗಿರಬೇಕು. ಧರ್ಮ ಕಾರ್ಯಾಸಕ್ತನಾಗಿರಬೇಕು. ಧಾರ್ಮಿಕವಾದ ವ್ರತ-ನೇಮ, ನಿಯಮ, ದಯೆ, ದಾನ, ಪೂಜೆ, ಶೀಲ, ಉಪವಾಸ, ಸಜ್ಜನಿಕೆ, ಸಹಕಾರೀ ಮನೋಭಾವಗಳನ್ನು ತನ್ನ ಜೀವನದಲ್ಲಿ